# ಸಮಾಜ ವಿಜ್ಞಾನ

## SOCIAL SCIENCE - KANNADA

## ಮೂರನೇ ತರಗತಿ
## STANDARD THREE

### ಹಂತ - I
### TERM - I

ಸಮಾಜ ವಿಜ್ಞಾನ

# 1. ನನಗೆ ಇಷ್ಟವಾದ ಪ್ರಪಂಚ





ನಾನು ಮೀನಾ.



## ನನ್ನ ಮನೆಯಲ್ಲಿ.... ನನಗೆ

ಇಂಪಾದ ಹಾಡು ಹಾಡಲು ಇಷ್ಟ.
ರುಚಿಯಾದ ಊಟ ಮಾಡಲು ಇಷ್ಟ.
ಅಜ್ಜಿಯು ಹೇಳುವ ಕತೆ ಇಷ್ಟ.
ಅಮ್ಮ, ಅಪ್ಪನೊಡನೆ ಪ್ರವಾಸ ಹೋಗುವುದು ಇಷ್ಟ
ಅಣ್ಣನೊಡನೆ ಸೇರಿ ಕೆಲಸ ಮಾಡಲು ಇಷ್ಟ.



## ನನ್ನ ಪರಿಸರದಲ್ಲಿ.... ನನಗೆ

ಅಕ್ಕಪಕ್ಕದ ಮನೆಯ ಸ್ನೇಹಿತರೊಡನೆ ಆಟವಾಡುವುದು ಇಷ್ಟ.
ಅಂಗಡಿ ಬೀದಿಯಲ್ಲಿ ಸುತ್ತುವುದು ಇಷ್ಟ.
ಉದ್ಯಾನವನದಲ್ಲಿ ಉಯ್ಯಾಲೇ ಆಡುವುದು ಇಷ್ಟ
ಸಣ್ಣ ಸಣ್ಣ ಚೇಷ್ಟೆ ಮಾಡುವುದು ಇಷ್ಟ.
ಮೈದಾನದಲ್ಲಿ ಚಿಕ್ಕ ಬೈಸಿಕಲ್ ಓಡಿಸುವುದು ಇಷ್ಟ.



## ನಮ್ಮ ಶಾಲೆಯಲ್ಲಿ.... ನನಗೆ



ಸಸಿಗಳನ್ನು ನೆಟ್ಟು ಬೆಳಸಲು ಇಷ್ಟ

ಶಿಕ್ಷಕರು ನನ್ನನ್ನು ಹೊಗಳುವುದು ಇಷ್ಟ

ಬೆಳಗಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಇಷ್ಟ

ಶಾಲೆಗಳಲ್ಲಿ ಪೈಪೋಟಿಯಿಂದ ಕೆಲಸ ಮಾಡಲು ಇಷ್ಟ.

ಶಾಲೆಯಲ್ಲಿ ಸ್ನೇಹಿತರೊಡನೆ ಸಾಯಾಂಕಾಲ ಗುಂಪಾಗಿ ಆಟವಾಡಲು ಇಷ್ಟ.

**ನಿನಗೆ ಏನು ಮಾಡಲು ಇಷ್ಟ ? ಬರೆ.**

ನಿನ್ನ....

| ಮನೆಯಲ್ಲಿ | ಪರಿಸರದಲ್ಲಿ | ಶಾಲೆಯಲ್ಲಿ |
|---|---|---|
| | | |
| | | |
| | | |



ಲತಾ, ಜಮಾಲ್, ಜಾನ್, ಮೇರಿ ಇವರುಗಳು ನಿನ್ನ ರೀತಿಯೇ ಮೂರನೇ ತರಗತಿಯಲ್ಲಿ ಓದುತ್ತಿದ್ದಾರೆ. ಅವರು ಬೇರೆ ಬೇರೆ ಊರುಗಳಿಂದ ಬರುವವರು. ಅವರುಗಳು ಹೇಳುವುದನ್ನು ಕೇಳೋಣ.



ನಾನು ಲತಾ,
ನನ್ನ ಪೋಷಕರು ಕಿಳಾಪಾಕ್ಕಂ
ಗ್ರಾಮದಲ್ಲಿ ವಾಸಿಸುತ್ತಾರೆ. ನಮ್ಮ ಮನೆಯಲ್ಲಿ
ಒಂದು ಹಸು ಇದೆ.



ನನ್ನ ಹೆಸರು ಜಮಾಲ್.
ನಾನು ಮತ್ತು ನನ್ನ ಅಣ್ಣ, ನಮ್ಮ ತಾತ –
ಅಜ್ಜಿಯೊಡನೆ ನಾಗೂರಿನಲ್ಲಿ
ವಾಸಿಸುತ್ತೇವೆ.



ನಾನು ಜಾನ್. ನಾನು ನನ್ನ
ತಂಗಿ ಮೇರಿಯು ಅತ್ತೆ – ಮಾವನೊಡನೆ
ವಾಸಿಸುತ್ತೇವೆ. ನಮ್ಮ ಮನೆ
ತಾಂಬರಂನಲ್ಲಿರುವ ಬಹು
ಮಹಡಿಯ ಕಟ್ಟಡಗಳಿರುವ
ಕಾಲೋನಿಯಲ್ಲಿ ಇದೆ

ನೀನು ಎಲ್ಲಿ ಯಾರೊಡನೆ ವಾಸಿಸುತ್ತಿರುವೆ ?
ನಿನ್ನನ್ನು ಚಿತ್ರಿಸಿ ಬರೆ.





ಇದೇ ರೀತಿ ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬ, ದೊಡ್ಡ ಕುಟುಂಬ ಮತ್ತು ಸಣ್ಣ ಕುಟುಂಬವೆಂದು ಹಲವು ಕುಟುಂಬಗಳು ಉಂಟು.

**ನಿನ್ನ ಕುಟುಂಬ ವಿಭಕ್ತ ಕುಟುಂಬವೇ ? ಅವಿಭಕ್ತ ಕುಟುಂಬವೇ ?_________.**



" ನನ್ನ ಕುಟುಂಬವೆಂದರೆ ನನಗೆ ತುಂಬಾ ಇಷ್ಟ ನನ್ನ ಅಮ್ಮ, ನಾನು ಶಾಲೆಯಿಂದ ಬಂದ ತಕ್ಷಣ ನನ್ನನ್ನು ಪ್ರೀತಿಯಿಂದ ಅಪ್ಪಿಕೊಳ್ಳುವರು. ಶಾಲೆಯಲ್ಲಿ ಕಲಿಸಿದ ಪಾಠಗಳನ್ನು ಸಮಾಧಾನದಿಂದ ಕೇಳುವರು. ನನ್ನ ಅಣ್ಣ, ನನ್ನೊಡನೆ ಆಗಾಗ್ಗೆ ಪೈಪೋಟಿ ಮಾಡುತ್ತಾನೆ. ನನಗೆ ಕೋಪ ಬರುತ್ತದೆ. ನನ್ನ ತಾತ ಸಮಾಧಾನ ಮಾಡುತ್ತಾರೆ. ನನ್ನ ಪೋಷಕರು ನನ್ನ ಮೇಲೆ ಹೆಚ್ಚು ಗಮನಕೊಡುತ್ತಾರೆ. ನಮ್ಮ ಮನೆಯಲ್ಲಿ ನಾನು ಸ್ವಂತಂತ್ರವಾಗಿ ಇರಲು ಸಾಧ್ಯವಿದೆ."

- ❖ ಮನೆಯಲ್ಲಿ ನಿನ್ನ ಮುದ್ದಿನ ಹೆಸರೇನು? ________________.
- ❖ ನೀನು ಮನೆಯಲ್ಲಿ ಮಾತನಾಡುವ ಭಾಷೆ ಯಾವುದು ? __________________.
- ❖ ನಿನಗೆ ದುಃಖ ಬಂದರೆ ಮೊದಲು ಯಾರನ್ನು ಹುಡುಕಿಕೊಂಡು ಹೋಗುವೆ ? ______.
- ❖ ಭಯವಾದರೆ ಯಾರ ಹಿಂದೆ ಓಡಿ ಅವಿತು ಕೊಳ್ಳುವೆ ? _______________.
- ❖ ಆರೋಗ್ಯ ಸರಿಯಿಲ್ಲದಿರುವಾಗ ಯಾರು ನಿನ್ನ ಹತ್ತಿರವಿರಬೇಕು ಎಂದು ಭಾವಿಸುವೆ ?

_____________________________________________

ಗೊತ್ತಿಲ್ಲದೆ ತಪ್ಪು ಮಾಡಿದರೆ ಅದನ್ನು ಧೈರ್ಯವಾಗಿ ಒಪ್ಪಿಕೊಳ್ಳುವೆಯ?ಯಾರಲ್ಲಿ?

_____________________________________________

ಮೀನಾ ತನ್ನ ಹೆಬ್ಬೆಟ್ಟಿನ ಬೆರಳುಗಳ ರೇಖೆಯನ್ನು ಒಂದು ಹಾಳೆಯಲ್ಲಿ ಮುದ್ರಿಸಿ, ಅವುಗಳಲ್ಲಿ ತನ್ನ ಕುಟುಂಬ ಸದಸ್ಯರುಗಳ ಅಕೃತಿಗಳನ್ನು ಬದಲಿಸಿ ರಚಿಸಿದ್ದಾಳೆ.



**ಇದೇ ರೀತಿ ನಿನ್ನ ಮನೆಯಲ್ಲಿರುವವರ ಆಕೃತಿಗಳನ್ನು ರಚಿಸಿ.**



## ನಿಮ್ಮ ಮನೆಯಲ್ಲಿ ಕೇಳಿ ವಿಷಯವನ್ನು ಸಂಗ್ರಹಿಸು.

ನಿನ್ನ ತಾತ ಚಿಕ್ಕವಯಸ್ಸಿನಲ್ಲಿ ಯಾವ ಊರಿನಲ್ಲಿ ವಾಸಿಸಿದ್ದರು ?

____________________________________________

ನಿನ್ನ ಅಜ್ಜಿ ಚಿಕ್ಕ ವಯಸ್ಸಿನಲ್ಲಿ ವಾಸಿಸಿದ ಊರು ಯಾವುದು ?

__________________________________________________________.

ಅವರು ಚಿಕ್ಕ ವಯಸ್ಸಿನಲ್ಲಿ ಸ್ನೇಹಿತರೊಡನೆ ಆಡಿದ ಆಟಗಳು ಯಾವುವು ?

__________________________________________________________.

ಅವರು ಆಟವಾಡುವಾಗ ನಡೆದ ಸ್ವಾರಸ್ಯವಾದ ಘಟನೆಗಳನ್ನು ಬಗ್ಗೆ ಅವರ ಬಳಿ ಕೇಳಿ ವಿವರವನ್ನು ಶೇಖರಿಸಿ?

________________________________________________.

ಆ ಕಾಲದ ಆಟಗಳು ಇನ್ನೂ ಮುಂದುವರಿಯುತ್ತಿದೆಯೇ ?
ಇಲ್ಲದಿದ್ದರೆ, ಆ ಆಟಗಳ ಬಗ್ಗೆ ಕೇಳಿ ತಿಳಿದುಕೊ.

__________________________________________________________.

ಅವುಗಳಲ್ಲಿ ನೀನು ಆಡುವ ಆಟಗಳು ಯಾವುವು?
ನಿನಗೆ ಬಲು ಇಷ್ಟವಾದ ಆಟ ಯಾವುದು? ಏಕೆ?

__________________________________________________________.

ಪ್ರತ್ಯೇಕವಾಗಿ ಆಟ ಆಡುವೆಯ ? ಸ್ನೇಹಿತರೊಡನೆ ಆಡುವೆಯ ?________________.
ಯಾರು ಯಾರೊಡನೆ ಆಟವಾಡುವೆ ?

| ಶಾಲೆಯಲ್ಲಿ | ಮನೆಯ ಹತ್ತಿರ |
|---|---|
| ________________ | ________________ |
| ________________ | ________________ |
| ________________ | ________________ |



ನಮ್ಮ ಮನೆಯಲ್ಲಿ ಎಲ್ಲರೊಡನೆ ಪ್ರೀತಿಯಿಂದ ನಡೆದುಕೊಳ್ಳಲು ಇಷ್ಟವಾದ ಕೆಲಸಗಳನ್ನು ಮಾಡಲು, ಭಾವನೆಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು ಸಾಧ್ಯ.

ಇದು ಸುಮತಿ ಮತ್ತು ಶರಣ್‌ರವರ ಮನೆ ಅವರು ತಮ್ಮ ಅಮ್ಮ, ಅಪ್ಪನೊಡನೆ ಅವರ ಮನೆ ಕೆಲಸಗಳನ್ನು ಹಂಚಿಕೊಂಡು ಮಾಡುವುದನ್ನು ನೋಡಿರಿ.









ನೀನು ನಿಮ್ಮ ಮನೆಯಲ್ಲಿ ಯಾವ ರೀತಿಯ ಸಹಾಯ ಮಾಡುವೆ ?

____________________ ____________________

____________________ ____________________

____________________ ____________________

ರಜಾ ದಿನಗಳಲ್ಲಿ ನಿನ್ನ ಕುಟುಂಬದೊಡನೆ ಯಾವ ರೀತಿ ಸಂತೋಷದಿಂದ ಕಳೆಯುವೆ ?

____________________ ____________________

____________________ ____________________

ನಿನ್ನ ಮನೆಯ ಚಿತ್ರವನ್ನು ಬಿಡಿಸು. ಮನೆಯ ಸುತ್ತಲು ನಿನಗೆ ಇಷ್ಟವಿರುವ ಮರ - ಗಿಡಗಳನ್ನು ಬಿಡಿಸಿ ಆನಂದಿಸು.













# 2. ನನ್ನ ಸುತ್ತ ಮುತ್ತ

ನಾವು ಜೀವಿಸುವ ಪ್ರದೇಶದಲ್ಲಿ ಹಲವು ವಿಧವಾದ ಜನರು ನಮ್ಮೊಂದಿಗೆ ಸೇರಿ ವಾಸಿಸುತ್ತಿದ್ದಾರೆ. ಈ ಜನರ ಅವಶ್ಯಕತೆಗಾಗಿ ರಸ್ತೆಗಳು, ಕಾಲುದಾರಿ, ಸೂಚನಾ ಫಲಕಗಳು ಮತ್ತು ಅಂಗಡಿ ಬೀದಿ ಮುಂತಾದುವು ಇವೆ. ಇದೇ ರೀತಿ ನಿನ್ನ ಸುತ್ತ ಮುತ್ತ ಏನೇನು ಇವೆ? ತಿಳಿಸು. **ಲತಾ, ಜಮಾಲ್, ಜಾನ್ ಮತ್ತು ಮೇರಿಯ ಸುತ್ತ- ಮುತ್ತಲಿನ ಬಗ್ಗೆ ಅವಳು ಹೇಳಾವುದನ್ನು ಕೇಳೋಣ?**

ಲತಾ



ನಾವು ಕಿಳಾಪಾಕಂ ಎಂಬಲ್ಲಿ ವಾಸಿಸುತ್ತಿದ್ದೇವೆ. ಈ ಸ್ಥಳದಲ್ಲಿ ರಸ್ತೆ ಐದು ಕವಲುದಾರಿ ಮಾರ್ಗಗಳಾಗಿ ಹೋಗುವುದರಿಂದ ಈ ಹೆಸರು ಬಂದಿದೆ. ಇಲ್ಲಿ ಮನೆಗಳು ಹೆಚ್ಚಾಗಿ ಇವೆ.ನಮ್ಮ ಬೀದಿಯಲ್ಲಿ ಒಂದು ಕುಡಿಯುವ ನೀರಿನ ಟ್ಯಾಂಕು, ಒಂದು ನ್ಯಾಯ ಬೆಲೆ ಅಂಗಡಿ ಇದೆ. ಕೆಲವು ವೇಳೆ ನನ್ನ ಅಮ್ಮ ಆ ಅಂಗಡಿಯಲ್ಲಿ ಮಿಠಾಯಿ ತೆಗೆದು ಕೊಡುತ್ತಾರೆ. ಅಪ್ಪ ಚೆನ್ನೈಯಲ್ಲಿ ರಸ್ತೆ ಬದಿಯ ಉಪಹಾರಗೃಹದಲ್ಲಿ ಕೆಲಸ ಮಾಡುತ್ತಿದ್ದಾರೆ. ರಜಾ ದಿನಗಳಲ್ಲಿ ಮಾತ್ರ ಮನೆಗೆ ಬರುತ್ತಾರೆ.

ಕಲಾ ಮತ್ತು ವಾಣಿ ನನ್ನ ಗೆಳತಿಯರು. ನಾವು ಒಟ್ಟಾಗಿ ಶಾಲೆಗೆ ಹೋಗುತ್ತೇವೆ. ಸಂಜೆ ವೇಳೆಯಲ್ಲಿ ಕುಂಟೆಬಿಲ್ಲೆ ಆಟವಾಡುತ್ತೇವೆ. ನನ್ನ ಗೆಳತಿಯ ಪೋಷಕರು ರೈತರು. ನಮ್ಮ ಬೀದಿಯಲ್ಲಿ ವಾಸಿಸುವವರೆಲ್ಲರೂ ಒಟ್ಟಾಗಿ ಸೇರಿ ಎಲ್ಲಾ ಹಬ್ಬಗಳನ್ನು ಆಚರಿಸುತ್ತೇವೆ. ನಾವು ಒಬ್ಬರಿಗೊಬ್ಬರು ಸಿಹಿ ತಿಂಡಿಯನ್ನು ಹಂಚಿಕೊಂಡು ಆನಂದಿಸುವೆವು.

ಲತಾಳ ಗೆಳತಿಯರು ಯಾರು ಯಾರು ?

ಲತಾಳ ಮನೆಯ ಸುತ್ತ ಏನೇನು ಇದೆ?

ತಾನು ವಾಸಿಸುವ ಪ್ರದೇಶದಲ್ಲಿ ಇರುವವರೊಂದಿಗೆ ಸೇರಿ ಲತಾ ಏನೇನು ಮಾಡುತ್ತಾಳೆ ?



ಜಮಾಲ್



ಅಮ್ಮ, ನಾನು, ಚಿಕ್ಕಮ್ಮ ಮತ್ತು ಚಿಕ್ಕಪ್ಪ ಎಲ್ಲಾರೂ ಕೂಡಿ ವಾಸಿಸುತ್ತಿದ್ದೇವೆ. ನಮ್ಮ ತಾತ, ಅಜ್ಜಿ ನಾಗೂರು ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ನಾವು ಅವಿಭಕ್ತ ಕುಟುಂಬಕ್ಕೆ ಸೇರಿದವರು. ನಮ್ಮ ಮನೆ ಸಮುದ್ರ ತೀರದಲ್ಲಿ ಇದೆ. ನಮ್ಮ ಹಳೆಯ ಮನೆ ದುರಸ್ತಿಯಾಗಿದೆ. ಆದ್ದರಿಂದ ನಾವು ಹೊಸ ಮನೆಯನ್ನು ಕಟ್ಟಿದ್ದೇವೆ. ಈಗ ಹೊಸ ಮನೆಯ ಸುತ್ತ ಮರಗಳನ್ನು ಬೆಳೆಸಿದ್ದೇವೆ. ನಮ್ಮ ಬೀದಿಯಲ್ಲಿ 30 ಮನೆಗಳು ಇವೆ. ವಾಸಿಸುವವರಲ್ಲಿ ಹೆಚ್ಚಿನವರು ಮೀನುಗಾರರು.

ಜಮಾಲ್ ಯಾರೊಂದಿಗೆ ವಾಸಿಸುತ್ತಿದ್ದಾನೆ?

ಜಮಾಲ್ ಮನೆ ಎಲ್ಲಿ ಇದೆ?

ಜಮಾಲ್ ಸುತ್ತ – ಮುತ್ತಲಿನ ಪ್ರದೇಶವನ್ನು ನಕ್ಷೆಯಲ್ಲಿ ಬರೆ.

ಮೇರಿ



ನಾವು ನಮ್ಮ ಅತ್ತೆಯೊಂದಿಗೆ ವಾಸಿಸುತ್ತಿದ್ದೇವೆ. ನಮ್ಮ ಮನೆ ಧಾರಾಪುರದಲ್ಲಿದೆ. ನಮ್ಮ ಬಹು ಮಹಡಿ ವಾಸ ಸ್ಥಳದಲ್ಲಿ 40 ಕುಟುಂಬಗಳು ಇವೆ. ಶಾಲೆಗೆ ಹೋಗದ ಮಕ್ಕಳನ್ನು ಪತ್ತೆಹಚ್ಚಿ ಶಾಲೆಗೆ ಸೇರಿಸುವುದು ನನ್ನ ಪೋಷಕರ ಕೆಲಸವಾಗಿದೆ. ಅವರು ಹೆಚ್ಚು ದಿನಗಳುಲ ಬೇರೆ ಊರಿಗೆ ಹೋಗಬೇಕಾಗುತ್ತದೆ. ಆದ್ದರಿಂದ ನಾವು ನಮ್ಮ ಅತ್ತೆಯೊಂದಿಗೆ ವಾಸಿಸುತ್ತಿದ್ದೇವೆ. ನಮ್ಮ ಅಕ್ಕ–ಪಕ್ಕದ ಮನೆಯ ಮಕ್ಕಳೆಲ್ಲರೂ ಸೇರಿ ಸಂಜೆಯ ವೇಳೆ ಆಟವಾಡುತ್ತೇವೆ. ಆದರೆ ನಾವು ಬೇರೆ ಬೇರೆ ಶಾಲೆಗಳಲ್ಲಿ ಓದುತ್ತಿದ್ದೇವೆ. ಮೇರಿಗೆ ವಂಡಲೂರು ಪ್ರಾಣಿಗಳ ಸಂರಕ್ಷಣಾಲಯ ತುಂಬಾ ಇಷ್ಟ ,ಏಕೆಂದರೆ ಅಲ್ಲಿ ಮರಗಳು ಮತ್ತು ಪ್ರಾಣಿಗಳು ಬಹಳವಾಗಿ ಇವೆ.

ಜಾನ್



ಜಾನ್ ಮತ್ತು ಮೇರಿಯ ಮನೆ ಎಲ್ಲಿ ಇದೆ ?

ಅವರು ಏಕೆ ಅತ್ತೆಯೊಂದಿಗೆ ವಾಸಿಸುತ್ತಿದ್ದಾರೆ ?

ಮೇರಿಗೆ ಏಕೆ ವಂಡಲೂರು ಪ್ರಾಣಿ ಸಂರಕ್ಷಣಾಲಯ ತುಂಬಾ ಇಷ್ಟ?

ನೀನು ವಾಸಿಸುವ ಪ್ರದೇಶ ಇವರಲ್ಲಿ ಯಾರಂತೆ ಇದೆ ?

ಅವರು ಹೇಳಿದಂತೆ ನೀನು ವಾಸಿಸುವ ಪ್ರದೇಶದ ಬಗ್ಗೆ ನಿನ್ನಿಂದ ಬರೆಯಲು ಸಾಧ್ಯವೇ?

ಶಿಕ್ಷಕರ ಸಹಾಯದಿಂದ ಬರೆ.

ಚಿತ್ರವನ್ನು ನೋಡು. ನೀನು ಯಾವ ರೀತಿ ನಡೆದು ಕೊಂಡರೆ ನಿನ್ನ ಅಕ್ಕ-ಪಕ್ಕದ ಮನೆಯವರಿಗೆ ನಿನ್ನನ್ನು ಕಂಡರೆ ಇಷ್ಟವಾಗುವುದು?










---

---

---

ನಿನ್ನ ಮನೆಯ ಪಕ್ಕದಲ್ಲಿ ವಾಸಿಸುವವರಲ್ಲಿ ನಿನಗೆ ಇಷ್ಟವಾದವರು ಯಾರು? ಯಾರು ? ಏಕೆ ಇಷ್ಟ ? ಅವರೆಲ್ಲರೊಂದಿಗೆ ಹೇಗೆ ವರ್ತಿಸುವೆ ?





## ನಿನ್ನ ಮನೆಯಲ್ಲಿ / ಅಕ್ಕ - ಪಕ್ಕದಲ್ಲಿ ಇರುವ ಹಿರಿಯರನ್ನು ಕೇಳಿ ಉತ್ತರವನ್ನು ಬರೆ.

| ಕೇಳಬೇಕಾದ ಪ್ರಶ್ನೆ | ನಿನ್ನ ಮನೆಯಲ್ಲಿ | ನಿನ್ನ ಸ್ನೇಹಿತನ ಮನೆಯಲ್ಲಿ |
| --- | --- | --- |
| ಎಷ್ಟು ವರ್ಷಗಳಿಂದ ಈ ಪ್ರದೇಶದಲ್ಲಿ ವಾಸಿಸುತ್ತಿದ್ದೀರಿ? | | |
| ನಿಮ್ಮ ಮನೆಯ ಹತ್ತಿರದಲ್ಲಿರುವ ನಿಮಗೆ ಇಷ್ಟವಾದ ಎರಡು ಸ್ಥಳಗಳನ್ನು ಬರೆ . | | |
| ನೀವಿರುವ ಪ್ರದೇಶದಲ್ಲಿ ಇಲ್ಲದ ಆದರೆ ನಿಮಗೆ ಅವಶ್ಯಕವಾಗಿರುವ ಸೌಕರ್ಯಗಳು. | | |

## ನನ್ನ ಶಾಲೆಯಲ್ಲಿ....



ನಾವು ನಮ್ಮ ಮನೆ ಬಿಟ್ಟರೆ ಅನಂತರ ನಾವು ಹೆಚ್ಚು ಸಮಯ ಇರುವ ಸ್ಥಳ ಶಾಲೆ. ಶಾಲೆಯಲ್ಲಿ ಶಿಕ್ಷಕರೊಂದಿಗೆ ಮತ್ತು ಸಹಪಾಠಿಗಳೊಂದಿಗೆ ಉತ್ತಮವಾಗಿ ಬೆರೆಯುವ ಅವಕಾಶ ಏರ್ಪಡುತ್ತದೆ. ಆದ್ದರಿಂದ ಶಾಲೆಯನ್ನು ಒಂದು ಕುಟುಂಬ ಎನ್ನಬಹುದು.

.ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ನೀನು ವಾಸಿಸುವ ಪ್ರದೇಶವನ್ನು ಬಣ್ಣ ಹಚ್ಚಿ ತೋರಿಸು.



ನಿನ್ನ ಅಧ್ಯಾಪಕರ ಸಹಾಯದಿಂದ ಸರಿಯಾದ ಸರಣಿಯನ್ನು ರಚಿಸಿರಿ.

| | | |
|---|---|---|
| ನನ್ನ ಪರಿಸರದಲ್ಲಿ | ಜೈವಿಕ ಉದ್ಯಾನ<br>ವಾಣಿಜ್ಯ ಸಂಕೀರ್ಣ<br>ಶಾಲೆ<br>ಆರಕ್ಷಕ ಠಾಣೆ<br>ಹೂದೋಟ<br>ಔಷದಿ ಅಂಗಡಿ<br>ಆಸ್ಪತ್ರೆ<br>ದೇವಾಲಯ<br>ಮಸೂದಿ<br>ದೇವಸ್ಥಾನ | ಇದೆ<br>ಇಲ್ಲ |




ಈ ಸೂಚನಾ ಫಲಕದಲ್ಲಿ ಇರುವ ಪ್ರಕಟಣೆಯನ್ನು ನೋಡು. ಇದನ್ನು ಏಕೆ ಇಡಲಾಗಿದೆ?

ಇದರಿಂದ ಉಂಟಾಗುವ ಒಳಿತುಗಳು ಫಲಕ?

ಇವುಗಳನ್ನು ಅನುಸರಿಸದೆ ಹೋದರೆ ಏರ್ಪಡುವ ತೊಂದರೆಗಳು ಯಾವುವು?

**ಪೂರ್ತಿಗೊಳಿಸಿ**

ಎಂಜಲನ್ನು ಉಗುಳು ಉಗುಳದರೆ ಪರಿಸರ ಅಶುದ್ಧವಾಗುತ್ತದೆ. ರೋಗ ಹರಡುತ್ತದೆ.

______________________________

ನೀರನ್ನು ವ್ಯರ್ಥಮಾಡಿದರೆ ______________________________

ಸಾಲಾಗಿ ಬರುವುದನ್ನು ಅನುಸರಿಸದಿದ್ದರೆ ______________________________

ಪ್ರಾಣಿಗಳನ್ನು ______________________________

ನೀನು ನಿನ್ನ ಶಾಲೆಯಲ್ಲಿ ಕಲಿತದ್ದು ....

______________________________

______________________________

# 3. ಶಾಲೆಗೆ ಬರುವ ದಾರಿಯಲ್ಲಿ....

ನಾವು ದಿನವೂ ಶಾಲೆಗೆ ಬರುವ ದಾರಿಯಲ್ಲಿ ಹಲವು ಬಗೆಯ ಮರಗಳು, ಬಣ್ಣ ಬಣ್ಣದ ಪಕ್ಷಿಗಳು, ಬಗೆ ಬಗೆಯಾದ ವಾಹನಗಳು, ವಿಧವಿಧವಾದ ಶಬ್ದಗಳು, ಪರಿಚಿತರು, ಅಪರಿಚಿತರು, ಮನುಷ್ಯರು, ಹಲವು ಬಗೆಯ ದೃಶ್ಯಗಳು ಮೊದಲಾದವುಗಳನ್ನು ದಾಟಿ ಬರುತ್ತೇವೆ. ಇವುಗಳ ಮೂಲಕ ಒಂದೊಂದು ದಿನವೂ ಒಂದೊಂದು ರೀತಿಯ ಅನುಭವವನ್ನು ಪಡೆಯುತ್ತೇವೆ.




ನಮ್ಮ ಪರಿಸರ

ಇವುಗಳು ಮೀನಾ ಶಾಲೆಗೆ ಬರುವ ದಾರಿಯಲ್ಲಿ ನೋಡಿದ ದೃಶ್ಯಗಳು. ಇದೇ ರೀತಿ ನೀನು ಶಾಲೆಗೆ ಬರುವ ದಾರಿಯಲ್ಲಿ ಏನೇನು ನೋಡಿದೆ ? ಅವುಗಳು ಕೆಳಗೆ ಇರುವ ಚಿತ್ರಗಳಲ್ಲಿದ್ದರೆ ಆ ಚಿತ್ರಕ್ಕೆ ವೃತ್ತ ಹಾಕು.



ನೀನು ಶಾಲೆಗೆ ಬರುವ ದಾರಿಯಲ್ಲಿ ನೋಡಿದ ಒಂದು ದೃಶ್ಯವನ್ನು ಚಿತ್ರವಾಗಿ ಬರೆ.

ತನ್ನ ವಾಸಸ್ಥಳಕ್ಕಿರುವ ದಾರಿಯನ್ನು ಬೇರೆ ಜೀವರಾಶಿಗಳು ಹೇಗೆ ತಿಳಿದುಕೊಳ್ಳುವುವು ಎಂದು ನೋಡೋಣವೇ?



ಆಹಾರವನ್ನು ಹುಡುಕಿ ಹೋಗುವ ಪಕ್ಷಿ ಮತ್ತೆ ತನ್ನ ಗೂಡಿಗೆ ಹೇಗೆ ಹಿಂತಿರುಗಿ ಹೋಗುವುದು?



ಒಂದು ವೇಳೆ ಅದು ಗಾಳಿಯ ಮೂಲಕವೇ ತನ್ನ ದಾರಿಯನ್ನು ರಚಿಸಿಕೊಂಡಿದೆಯೇ!



ಮರದಿಂದ ಮರಕ್ಕೆ ಹಾರಿ ತನ್ನ ಆಹಾರವನ್ನು ಕಾಡಿನಲ್ಲಿ ಹುಡುಕುವ ಕೋತಿಯು ಹೇಗೆ ತಾನೇ ತನ್ನ ವಾಸಸ್ಥಳಕ್ಕೆ ಹಿಂದಿರುಗುವುದು?
ಮರಗಳೇ ಅದಕ್ಕೆ ರಸ್ತೆಯಾಗಿ ತಿಳಿಯವುದೋ!



ನೀರಿನಲ್ಲಿ ಜೀವಿಸುವ ಮೀನು ಹೇಗೆ ತನ್ನ ವಾಸಸ್ಥಳವನ್ನು ತಿಳಿಯುವುದು? ನೀರಿನಲ್ಲಿ ಅದಕ್ಕಾಗಿಯೇ ದಾರಿಯ ರಚನೆಯಾಗಿದೆಯೇ ?



ನೀನು ಮನೆಯಿಂದ ಶಾಲೆಗೆ ಹೋಗಿ ಬರುವ ದಾರಿಯನ್ನು ಹೇಗೆ ತಿಳಿಯುವೇ? ನಾವು ಹೋಗುವ ದಾರಿಯಲ್ಲಿ ದೇವಸ್ಥಾನಗಳು, ಆಸ್ಪತ್ರೆ, ಸಂತೆ, ಅಂಚೆ ಕಛೇರಿ, ಆರಕ್ಷಕ ಠಾಣೆ, ರೈಲು ನಿಲ್ದಾಣಗಳಂತಹ ಹಲವು ಸ್ಥಳಗಳ ಗುರುತುಗಳವೆ.

ಇಂತಹ ಗುರುತುಗಳು ಪ್ರತಿದಿನ ನಾವು ಹೋಗಿ ಬರುವಾಗ ನಮ್ಮ ಮನಸ್ಸಲ್ಲಿ ಸ್ಥಿರವಾಗಿ ಉಳಿಯುತ್ತವೆ.ಆದುದರಿಂದ ಮನೆಯಿಂದ ಶಾಲೆಯಂತೆ ಇತರ ಸ್ಥಳಗಳಿಗೂ ಸುಲಭವಾಗಿ ಹೋಗಿ ಬರಲು ನಮ್ಮಿಂದ ಸಾಧ್ಯವಾಗಿದೆ. ನಾವು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಲು ರಸ್ತೆಗಳು ಉಪಯೋಗವಾಗುತ್ತವೆ.

ಗ್ರಾಮಗಳಲ್ಲಿ ಕಾಲುದಾರಿಗಳು ಇರುತ್ತವೆ. ಡಾಂಬರು ರಸ್ತೆಗಳು ಗ್ರಾಮಗಳನ್ನು ನಗರಗಳ ಜೊತೆ ಸೇರಿಸುತ್ತವೆ. ರಸ್ತೆಗಳು ಜನರ ಸಂಚಾರ – ಸಾರಿಗೆಗಳಿಗೆ ಮತ್ತು ಅವರು ಉತ್ಪತ್ತಿ ಮಾಡಿದ ವಸ್ತುಗಳನ್ನು ಸಾಗಿಸುವುದಕ್ಕೂ ಉಪಯುಕ್ತವಾಗಿವೆ. ರಸ್ತೆಗಳಲ್ಲಿ ಯಾವಾಗಲೂ ವಾಹನಗಳು ಹೆಚ್ಚಾಗಿ ಕಾಣಿಸುತ್ತವೆ. ನಾವು ರಸ್ತೆಯಲ್ಲಿ ನಡೆಯುವಾಗ ರಸ್ತೆಬದಿಯಲ್ಲಿ  ಪಾದಚಾರಿಗಳ ಮಾರ್ಗದಲ್ಲಿ ನಡೆಯಬೇಕು.

ದೊಡ್ಡ ನಗರಗಳಲ್ಲಿ ರಸ್ತೆಯನ್ನು ದಾಟುವುದಕ್ಕೆ ಸೇತುವೆಗಳನ್ನೂ, ಸುರಂಗಮಾರ್ಗಗಳನ್ನೂ ರಚಿಸಿರುತ್ತಾರೆ. ರಸ್ತೆಗಳಲ್ಲಿ ಪಾದಾಚಾರಿಗಳು ರಸ್ತೆಯನ್ನು ದಾಟುವ ಸ್ಥಳವನ್ನೂ ರಚಿಸಲ್ಪಟ್ಟಿವೆ.

ಶಾಲೆಗೆ ಬರುವ ದಾರಿಯಲ್ಲಿ ಪರಿಚಯವಿಲ್ಲದವರ ಹತ್ತಿರ ಮಾತನಾಡಬಾರದು. ಅವರು ಕೊಡುವ ಬಹುಮಾನಗಳನ್ನೋ, ತಿನ್ನುವ ಪದಾರ್ಥಗಳನ್ನೋ ತೆಗೆದುಕೊಳ್ಳಬಾರದು.

ನಿನ್ನ ಗೆಳೆಯರು ನಿನ್ನ ಮನೆಗೆ ಬರಲು ನೀನು ಕೆಲವು ಗುರುತುಗಳನ್ನು ಹೇಳುವೆ ಅಲ್ಲವೇ? ಇನ್ನೂ ಸುಲಭವಾಗಿ ದಾರಿ ತೋರಿಸಲು ವಿಳಾಸ ಸಹಾಯವಾಗುತ್ತದೆ.

ನಿನಗೆ ನಿನ್ನ ಮನೆಯ ವಿಳಾಸ ಗೊತ್ತಿದೆಯೇ ?

ಹೆಸರು :____________________

ತಂದೆಯ ಹೆಸರು :____________________

ಮನೆಯ ಸಂಖ್ಯೆ :____________. ಬೀದಿಯ ಹೆಸರು:____________

ಊರು :____________________ ಜಿಲ್ಲೆ :__________

ರಾಜ್ಯ: ____________________

ಅಂಚೆ ಸೂಚನಾ ಸಂಖ್ಯೆ :____________________





ನಿನ್ನ ಮನೆಗೆ ಕಾಗದಗಳು ಬಂದು ಸೇರಲು ವಿಳಾಸ ಬಹುಮುಖ್ಯವಾಗಿದೆ. ಆದ್ದರಿಂದ ನಿನ್ನ ವಿಳಾಸವನ್ನು ಯಾವಾಗಲೂ ಮರೆಯಬಾರದು. ನಿನಗೆ ನಿನ್ನ ಮನೆಗೆ ಹೋಗಲು ದಾರಿ ತಿಳಿಯದ ಸಂದರ್ಭಗಳಲ್ಲಿ ವಿಳಾಸವು ಸಹಾಯ ಮಾಡುತ್ತದೆ. ನಮ್ಮ ಮನೆಯನ್ನು ಬೇರೆಯವರು ಸುಲಭವಾಗಿ ಕಂಡು ಹಿಡಿಯಲು ತಿಳಿದಿರುವ ಸ್ಥಳ ಸೂಚಕಗಳ ಮೂಲಕ ವಿನೋದವಾಗಿ ದಾರಿಯನ್ನು ಹೇಳೋಣವಾ?



ಹಸಿರು ಬಣ್ಣದ ಮಹಡಿ ಮನೆ, ದೊಡ್ಡ ಆಲದ ಮರ, ಅದರ ಪಕ್ಕದಲ್ಲಿ ಒಂದು ಹೊಸ ಮನೆ. ಮಲ್ಲಿಗೆಯ ಗಿಡ ಇರುವ ಮನೆ. ರೈಲುದಾರಿಯ ಪಕ್ಕದಲ್ಲಿರುವ ಮನೆ. ಗುಲಾಬಿ ಗಿಡ ಹೆಚ್ಚಾಗಿರುವ ಮನೆ. ಇನ್ನೂ ಹಲವು ಬಗೆಗಳಲ್ಲಿ ಸ್ಥಳಸೂಚಕಗಳ ಮೂಲಕ ವಿನೋದವಾಗಿ ನೀನು ವಾಸಿಸುವ ಮನೆಯು ಎಲ್ಲಿದೆ ಎಂದು ಹೇಳಬಹುದಲ್ಲವೇ? ಮನೆ ಎಂಬುದು ನಮಗೆ ನೋಡಲು, ಕೇಳಲು, ಅರ್ಥ ಮಾಡಿಕೊಳ್ಳಲು, ಸಂಬಂಧ ಮಾಡಲು, ಹಲವು ಅನುಭವಗಳನ್ನು ಕೊಡುತ್ತದೆ.



ನಿನಗೆ ಇಷ್ಟವಾದ ರೀತಿಯಲ್ಲಿ ನಿನ್ನ ಮನೆಗೆ ದಾರಿ ತೋರಿಸಲು ಪ್ರಯತ್ನಿಸಿ ನೋಡು.

ಸ್ಥಳಗಳನ್ನು ತಿಳಿಯಲು ಇನ್ನೊಂದು ಸುಲಭವಾದ ದಾರಿ ಬಲಪಕ್ಕ ಮತ್ತು ಎಡಪಕ್ಕಗಳನ್ನು ತಿಳಿಯುವುದು. ಒಂದು ಸುಲಭವಾದ ಆಟ, ಈ ಆಟವನ್ನು ನಿನ್ನ ಗೆಳೆಯರ ಜೊತೆ ಆಡು. ಇದರ ಹೆಸರು...



### "ಕನ್ನಡಿ ಮುಂದೆ"

ನೀನು, ನಿನ್ನ ಗೆಳೆಯನು ನೇರವಾಗಿ ಒಬ್ಬರಿಗೊಬ್ಬರು ನೋಡಿಕೊಂಡು ನಿಲ್ಲಿರಿ. ನೀನು ನಿನ್ನ ಗೆಳೆಯನನ್ನೂ, ನಿನ್ನ ಗೆಳೆಯನು ನಿನ್ನನ್ನೂ ಮುಖವನ್ನು ನೋಡುವ ಕನ್ನಡಿಯಾಗಿ ನೆನಸಿಕೊಳ್ಳಬೇಕು. ನೀನು ನಿನ್ನ ಬಲದ ಕೈಯನ್ನು ಮೇಲೆ ಎತ್ತು. ನಿನ್ನ ಗೆಳೆಯ ಯಾವ ಕೈಯನ್ನು. ಎತ್ತಬೇಕು.

______________________________



ನೀನು ನಿನ್ನ ಎಡದ ಕಿವಿಯನ್ನು ಮುಟ್ಟು. ನಿನ್ನ ಗೆಳೆಯ ಯಾವ ಕಿವಿಯನ್ನು ಮುಟ್ಟಬೇಕು?

______________________________

ಈ ಆಟವನ್ನು ಮುಂದುವರಿಸಿ ಆಟವಾಡಿರಿ.

ನೀನು ಮನೆಯನ್ನು ಬಿಟ್ಟು ಹೆಚ್ಚಾಗಿ ಹೊರಗೆ ಹೋಗುವುದೆಂದರೆ ಶಾಲೆಗೆ ತಾನೇ?
ನಿನಗೆ ನಿನ್ನ ಶಾಲೆಯ ವಿಳಾಸ ಗೊತ್ತಿದೆಯೇ ?

ಶಾಲೆಯ ಹೆಸರು : ______________________________

ಬೀದಿ : ______________________________

ಊರು : ____________________ ಜಿಲ್ಲೆ : ______________

ರಾಜ್ಯ : ______________ ಅಂಚೆ ಸೂಚನಾ ಸಂಖ್ಯೆ : __________

ನಿನ್ನ ಹಾಗೇಯೇ ಕಲಾ ಮೂರನೇ ತರಗತಿಯಲ್ಲಿ ಓದುತ್ತಿದ್ದಾಳೆ. ದಿನವೂ ತನ್ನ ಗೆಳತಿಯರಾದ ಆಯಿಷಾ, ಮೇಘಲಾ ಜೊತೆ ಶಾಲೆಗೆ ಹೋಗುವಳು. ಅವತ್ತು ತುಂತುರು ಮಳೆ



ಬೀಳುತ್ತಿತ್ತು.



ಅವಳು ಕೊಡೆಯನ್ನು ಹಿಡಿದು ಕೊಂಡು ಹೊರಟಳು.



ಅವರು ಕೊಳದ ಪಕ್ಕದಲ್ಲಿ ಹೋಗುವಾಗ



ವಟ.....



ವಟ..... ಎಂದು ಕಪ್ಪೆಯು ಶಬ್ದ ಮಾಡುತ್ತಿತ್ತು.



ಕೊಳದ ತೀರದಲ್ಲಿ ಒಂದು ಕೊಕ್ಕರೆಯನ್ನು ನೋಡಿದರು.



ಕಲಾ ಕಪ್ಪೆಯ ರೀತಿ ಕುಪ್ಪಳಿಸಿ ತೋರಿಸಿದಳು. ಮೇಘಲಾ ಕೈಗಳನ್ನೆತ್ತಿ ಕೊಕ್ಕರೆಯ ರೀತಿ ಹಾರಲು ಪ್ರಯತ್ನಿಸಿದಳು. "ಈ ಪಕ್ಷಿಯನ್ನು ನಮ್ಮ ಮನೆಯ ಮೇಲೆ ನೋಡಿದೆ" ಎಂದಳು ಕಲಾ. "ಕಪ್ಪೆಯ ರೀತಿ ಕುಪ್ಪಳಿಸುವುದನ್ನು ನಿಲ್ಲಿಸು, ನೀನು ನೆನೆದು ಬಿಟ್ಟೆ" ಎಂದಳು ಆಯಿಷಾ. ಮಳೆನಿಂತು ಸೂರ್ಯನು ಕಾಣಿಸಿಕೊಂಡನು.





ಅವರ ನೆರಳು ಅವರ ಮುಂದೆ ಬೀಳುತ್ತಿತ್ತು."ನಾನು ನಿನ್ನ ನೆರಳನ್ನು ಮುಟ್ಟಿಬಿಟ್ಟೆ. ನೀನು ನನ್ನ ನೆರಳನ್ನು ಮುಟ್ಟು ನೋಡೋಣ?"ಎಂದಳು ಆಯಿಷ. ಅವರು ಕುಣಿದೂ ಓಡಿಯೂ ತಮ್ಮ ನೆರಳನ್ನು ಮುಟ್ಟಲು ಪ್ರಯತ್ನಿಸಿದರು. ಆದರೆ ನೆರಳನ್ನು ಮುಟ್ಟಲು ಆಗಲಿಲ್ಲ. "ನನ್ನಿಂದ ನಿನ್ನ ನೆರಳನ್ನು ಮುಟ್ಟಲು ಸಾಧ್ಯವಿದೆ, ಆದರೆ ನನ್ನ ನೆರಳನ್ನು ಯಾಕೆ ನನ್ನಿಂದ ಮುಟ್ಟಲು ಸಾಧ್ಯವಿಲ್ಲ? ಎಂದಳು ಆಯಿಷಾ.

ನೀನು ಶಾಲೆಗೆ ಬರುವಾಗ ನಿನ್ನ ನೆರಳನ್ನು ನೋಡಿರುವೆಯಾ?
ಅದು ನಿನ್ನ ಯಾವ ಭಾಗದಲ್ಲಿರುವುದು? ______________.





ಗದ್ದೆಯನ್ನು ದಾಟಿದರೆ, ಅಯ್ಯನಾರ್ ದೇವಸ್ಥಾನ ಅದರ ನಂತರ ಮಾವಿನ ತೋಪು. ತೋಪಿನ ತುಂಬಾ ಮಾವಿನ ಕಾಯಿಗಳು ಜೋತಾಡುತ್ತಿವೆ. “ನನಗೆ ಮಾವಿನ ಕಾಯಿಯನ್ನು ತಿನ್ನಬೇಕಿನಿಸುತ್ತಿದೆ”ಎಂದಳು ಕಲಾ. ತೋಪಿನ ಪಕ್ಕದಲ್ಲಿ ಒಂದು ನಾಯಿಮರಿ ಅವರ ಜೊತೆ ಸೇರಿಕೊಂಡಿತು.



ಮಾತನಾಡಿಕೊಂಡೇ ಡಾಂಬರು ರಸ್ತೆಯನ್ನು ತಲುಪಿದರು. ಒಂದು ಬಸ್ಸು ಬಂದಿತು. ಕುಮಾರನು ಪ್ರತಿ ದಿನವೂ ಅದೇ ಬಸ್ಸಿನಲ್ಲಿ ಶಾಲೆಗೆ ಬರುತ್ತಾನೆ.



ರಸ್ತೆಯನ್ನು ದಾಟಿ ಒಂದು  ಪೆಟ್ಟಿಗೆ ಅಂಗಡಿ. ಅಲ್ಲಿ ತಾನೇ ರಸ್ತೆಯ ಮಧ್ಯೆ ಬಿಳಿಯ ಗೆರೆಯನ್ನು ಹಾಕಿರುತ್ತಾರೆ. ರಸ್ತೆಯ ಪಕ್ಕದಲ್ಲಿ ಕಾಯ್ದುಕೊಂಡಿದ್ದು, ವಾಹನಗಳು ಯಾವುದೂ ಬರದೇ ಇರುವಾಗ ರಸ್ತೆಯನ್ನು ದಾಟಿದರು. ಗಂಟೆ ಹೊಡೆಯುವ ಸಮಯದಲ್ಲಿ ಶಾಲೆ ತಲುಪಿದರು.



ಕಲಾ, ಮೇಘಲಾ, ಆಯಿಷಾ ಶಾಲೆಗೆ ಹೋಗುವ ದಾರಿಯಲ್ಲಿ ನೋಡಿದವುಗಳನ್ನು ಪಟ್ಟಿ ಮಾಡಿ.

______________________ ______________________

______________________ ______________________

______________________ ______________________



ಕಲಾಳ ರೀತಿ ಲತಾ ಶಾಲೆಗೆ ಹೋಗುವ ದಾರಿಯನ್ನು ಚಿತ್ರಪಟವಾಗಿ ಬರೆದಿದ್ದಾಳೆ. ಚಿತ್ರಪಟವನ್ನು ನೋಡಿ ತಿಳಿದುಕೊಳ್ಳಿ.


ಲತಾಳ ಚಿತ್ರ ಪಟ
ಲತಾಳಮನೆ
ರೈಲು ರಸ್ತೆ
ಉ
ಪ
ದ
ನೀರಿನ ತೊಟ್ಟಿ
ಇಗರ್ಜಿ
ನದಿ
ಅಂಗಡಿ
ಅಂಗಡಿ
ಬಾವಿ
ರವಿಯ ಮನೆ
ಕಬೀರ ಮನೆ
ಕಲಾಮನೆ
ಮನೆ
ದೇವಸ್ಥಾನ
ಮನೆ
ಅಂಗಡಿ
ಮಸೀದಿ
ಅಂಗಡಿ
ಬಸ್ ನಿಲ್ದಾಣ
ಉದ್ಯಾನವನ
ಶಾಲೆ.
ಮೈದಾನ

☞ ಲತಾ ಮನೆಯಿಂದ ಶಾಲೆಗೆ ಬರುವ ದಾರಿಯನ್ನು ಬಣ್ಣದ ಗೆರೆ ಹಾಕಿ ತೋರಿಸಿ.

☞ ರವಿ ಶಾಲೆಗೆ ಹೋಗುವ ಎರಡು ಬೇರೆ ಬೇರೆ ದಾರಿಗಳನ್ನು ಗೆರೆ ಹಾಕಿ ತೋರಿಸು.

☞ ಕಬೀರ್ ಮನೆಯಿಂದ ಶಾಲೆಗೆ ಬರುವ ದಾರಿಯಲ್ಲಿ ಎಡಭಾಗದಲ್ಲಿರುವವುಗಳನ್ನು ತೋರಿಸು.

_______________________________________________

☞ ಲತಾ ಶಾಲೆಗೆ ಹೋಗಲು ಎಷ್ಟು ಸುತ್ತುಗಳನ್ನು ದಾಟಬೇಕು?

☞ ಚಿತ್ರಪಟದಿಂದ ಒಂದು ಮನೆಯನ್ನು ಆರಿಸಿ, ಅದರ ಪಕ್ಕದಲ್ಲಿ ನಿನ್ನ ಹೆಸರನ್ನು ಬರೆ.

☞ ಚಿತ್ರಪಟದಲ್ಲಿರುವ ನಿನ್ನ ಮನೆಯಿಂದ ಶಾಲೆಗೆ ಬರುವ ದಾರಿಯನ್ನು ಬಾಣದ ಗುರುತಿನಿಂದ ತೋರಿಸು. ಒಂದು ಬೇರೆ ದಾರಿಯನ್ನು ತೋರಿಸು.



ಮಕ್ಕಳು ನಾಲ್ಕು ಗುಂಪುಗಳಾಗಿ ವಿಂಗಡಣೆಯಾಗಿರಿ. ಪ್ರತಿಯೊಂದು ಗುಂಪುಗಳು ಚಿತ್ರಪಟವನ್ನು ನೋಡಿ, ಇನ್ನೂ ಹಲವು ಪ್ರಶ್ನೆಗಳನ್ನು ನೀವೇ ರಚಿಸಿರಿ. ಒಂದು ಗುಂಪು ಕೇಳುವ ಪ್ರಶ್ನೆಗೆ ಬೇರೆ ಗುಂಪುಗಳು ಉತ್ತರವನ್ನು ಕಂಡು ಹಿಡಿದು ಉತ್ತರಿಸಿ.

ನಿನ್ನ ಶಾಲೆ ನಿನ್ನ ಮನೆಯ ಹತ್ತಿರದಲ್ಲಿದೆಯೇ? ದೂರದಲ್ಲಿದೆಯೇ?
ಹತ್ತಿರದಲ್ಲಿ, ದೂರದಲ್ಲಿ ಎನ್ನುವುದನ್ನು ಹೇಗೆ ತಿಳಿಯುವೆ ? ತಿಳಿಸು.

ನೀನು ಶಾಲೆಗೆ ಬರುವಾಗ ನೋಡಿದವುಗಳು.

☞ ಬಲದ ಭಾಗ _______________________________________________

_______________________________________________

☞ ಎಡದ ಭಾಗ _______________________________________________

_______________________________________________

ದಿನವೂ ನಿನ್ನ ಜೊತೆ ಶಾಲೆಗೆ ಬರುವವರು ಯಾರು ? ಯಾರು ?



❖ _______________________________________________

❖ _______________________________________________

❖ _______________________________________________

ನಿನ್ನ ಶಾಲೆಯಲ್ಲಿ ಓದುವ ಗೆಳೆಯರು ಯಾರಾದರೂ ನಿನ್ನ ಮನೆಯ ಹತ್ತಿರ ಇರುವರೇ? ಇದ್ದರೆ ಹೆಸರುಗಳನ್ನು ಬರೆ _______________________________.

**ಶಾಲೆಗೆ ಹೋಗುವಾಗ ನೀನು ನೋಡಿದ ಮರೆಯಲಾಗದ ಘಟನೆಯೊಂದನ್ನು ಹೇಳು.**

**ನಿನ್ನ ಊರಿನಲ್ಲಿರುವ ನೀರಿನ ನೆಲೆಗಳನ್ನು ✓ ಮಾಡು.**

ನದಿ ☐ ಕೆರೆ ☐ ಹೊಳೆ ☐ ಕೈಪಂಪು ☐

ಕೊಳಾಯಿ ☐ ಬಾವಿ ☐ ನೀರಿನ ನೆಲೆ ಯಾವುದೂ ಇಲ್ಲ ☐

**ಮನೆಯಿಂದ ಹೊರಗೆ ಹೋಗುವಾಗ ಹವಾಮಾನವನ್ನು ಗಮನಿಸಿದ್ದೀಯಾ ? ಮತ್ತು ಹವಾಮಾನ ಹೇಗಿತ್ತು? ✓ ಮಾಡು.**

| ದಿನಾಂಕ | ಉಷ್ಣ  | ಕಡಿಮೆ ಉಷ್ಣ  | ಗಾಳಿ  | ಮೋಡದಿಂದ ಕೂಡಿದ  | ಮಳೆ  | ಚಳಿ  |
|---|---|---|---|---|---|---|
| ನಿನ್ನೆ | | | | | | |
| ಇವತ್ತು | | | | | | |

**ಶಾಲೆಗೆ ಹೋಗುವ ದಾರಿಯಲ್ಲಿ ನೀನು ಯಾವ ಯಾವ ಕೆಲಸ ಮಾಡುವವರನ್ನು ನೋಡುತ್ತೀಯಾ ?**



______________________

______________________

______________________

______________________



**ನೀನು ದಾರಿಯಲ್ಲಿ ನೋಡುವ ದೃಶ್ಯಗಳನ್ನು ಪಟ್ಟಿ ಮಾಡು.**

| ಕಟ್ಟಡಗಳು | ಮರಗಳು | ಪ್ರಾಣಿಗಳು | ವಸ್ತುಗಳು |
|---|---|---|---|
| ಅಂಚೆ ಕಛೇರಿ | ಬೇವಿನ ಮರ | ನಾಯಿ | ಕಸದ ತೊಟ್ಟಿ |
| | | | |
| | | | |
| | | | |



## ಯೋಚಿಸಿ! ಯೋಚಿಸಿ!! ಮಾಡು.



ಬಿಡದೆ ಎರಡು ದಿನಗಳಲ್ಲೂ ನೀನು ಶಾಲೆಗೆ ಹೋಗುವ ದಾರಿಯನ್ನು ಗಮನಿಸು. ದಾರಿಯಲ್ಲಿ ಕಾಣುವ ಕೆಲವು ಸ್ಥಳಗಳಿಗೆ ನಿರ್ದಿಷ್ಟವಾದ ಹೆಸರುಗಳನ್ನು ಕೊಡಲಾಗಿದೆ.



ಇದೆ ರೀತಿ ಇತರ ಕೆಲವು ಸ್ಥಳಗಳಿಗೆ ಇರುವ ಗುರುತುಗಳನ್ನು ನೀನೇ ರಚಿಸು.

### ಚಿತ್ರಪಟವನ್ನು ಬರೆಯಿರಿ.

ನನ್ನ ಶಾಲೆಗೆ ಹೋಗುವ ದಾರಿ. ನಾನೇ ಬರೆದ ಚಿತ್ರಪಟ.





# 4. ದಿಕ್ಕುಗಳನ್ನು ತಿಳಿಯೋಣ.....



ಕವಿತಾ, ಮಲರ್ ಇಬ್ಬರೂ ಒಂದೇ ಶಾಲೆಯಲ್ಲಿ ಓದುತ್ತಿದ್ದಾರೆ. ಅವರು ಮನೆಯಿಂದ ಶಾಲೆಗೆ ಹೋಗಲು ಯಾವ ದಿಕ್ಕಿನಲ್ಲಿ ತಿರುಗಬೇಕು ಎಂಬುದರಲ್ಲಿ ಇಬ್ಬರಿಗೂ ವಿವಾದ. ಕವಿತಾ "ನಾವು ಎಡ ಪಕ್ಕ ತಿರುಗಬೇಕು" ಎಂದಳು. ಮಲರ್ "ಇಲ್ಲ, ಬಲ ಪಕ್ಕ ತಾನೇ" ಎಂದಳು .ಶಾಲೆಗೆ ಹೋಗುವ ತನಕ ವಿವಾದ ಮುಂದುವರಿಯಿತು.



ಇಬ್ಬರೂ ಶಿಕ್ಷಕಿಯ ಬರುವಿಕೆಗಾಗಿ ಆತುರದಿಂದ ಕಾದಿದ್ದರು. ಶಿಕ್ಷಕಿಯು ತರಗತಿಯೊಳಗೆ ಆಗಮಿಸಿದ ತಕ್ಷಣ ಅವರ ಹತ್ತಿರಕ್ಕೆ ಓಡಿದರು. "ಟೀಚರ್ ಶಾಲೆಗೆ ಬರಲು ನನ್ನ ಮನೆಯಿಂದ ಯಾವ ದಿಕ್ಕಿಗೆ ತಿರುಗಬೇಕು ? "ಎಡ ಪಕ್ಕಕ್ಕೆ ತಾನೇ?" ಎಂದಳು ಕವಿತಾ. "ಇಲ್ಲ, ಬಲ ಪಕ್ಕಕ್ಕೆ ತಾನೇ" ಎಂದಳು ಮಲರ್. ಶಿಕ್ಷಕಿಯು ನಗುತ್ತಲೇ "ಇಬ್ಬರೂ ಹೇಳಿದ್ದು ಸರಿ ಎಂದರು" ಶಿಕ್ಷಕಿಯು ಏಕೆ ಹಾಗೆ ಹೇಳಿದರು? ಎಂದು ನಿನ್ನಿಂದ ಕಂಡು ಹಿಡಿಯಲು ಸಾಧ್ಯವೇ? ಎಂದರು.

ಕವಿತ ಮತ್ತು ಮಲರ್ ಎದಿರು ಬದಿರು ಮನೆಯಲ್ಲಿ ವಾಸಿಸುತ್ತಾರೆ. ಕವಿತ ಮನೆಯ ಹೊರಗೆ ಬಂದು ಎಡ ಪಕ್ಕಕ್ಕೆ ತಿರುಗಿ ಶಾಲೆಗೆ ಹೋಗಬೇಕು. ಮಲರ್ ತನ್ನ ಮನೆಯ ಹೊರಗೆ ಬಂದು, ಬಲ ಪಕ್ಕಕ್ಕೆ ತಿರುಗಬೇಕು. ಚಿತ್ರದಲ್ಲಿ ಕವಿತಳ ಮನೆ ಯಾವುದು ? ಮಲರ್‌ನ ಮನೆ ಯಾವುದು ? ಕಂಡು ಹಿಡಿದು ಹೆಸರನ್ನು ಬರೆಯಿರಿ.





## ಒಂದು ಆಟವನ್ನು ಆಡೋಣವೇ ?



ಎಲ್ಲರು ಇರುವ ಸ್ಥಳದಲ್ಲಿಯೇ ಎದ್ದು ನಿಲ್ಲಿರಿ.
ತರಗತಿಯಲ್ಲಿ ನಿನಗೆ ಮುಂದುಗಡೆ
ಇರುವುದು ಏನು? /ಯಾರು? ________________

ನಿನ್ನ ಎಡಪಕ್ಕ ತಿರುಗು.
ಅಲ್ಲಿ ಇರುವುದು ____________________
ಪುನಃ ಎಡಪಕ್ಕ ತಿರುಗು,
ನೀನು ಈಗ ನೋಡುವುದು ______________.





ಪುನಃ ಎಡ ಪಕ್ಕ ತಿರುಗು.
ಅಲ್ಲಿ ಇರುವುದು _______________
ಪುನಃ ಎಡಪಕ್ಕ ತಿರುಗು
ಅಲ್ಲಿ ಇರುವುದು ________________.



ಹೀಗೆ ಈಗ ನೀನು ಇರುವ ಸ್ಥಳದಲ್ಲಿಯೇ
ನಿನ್ನನ್ನು ಒಂದು ಸುತ್ತು ಸುತ್ತಿರುವೆ.
ಇದೇ ರೀತಿ ಬಲಪಕ್ಕವೂ ಮಾಡಿನೋಡಿ.



**ಶಿಕ್ಷಕರಿಗೆ :**

ವಿದ್ಯಾರ್ಥಿಗಳು ಪ್ರತಿಯೊಂದು ಸಲ ಎಡದ ಕಡೆಗೆ ತಿರುಗುವಾಗಲೂ, ನೋಡುವ ವಸ್ತು ಅಥವಾ ವ್ಯಕ್ತಿಗಳನ್ನು ಗಮನವಿಟ್ಟು ನೋಡಿ ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡಿ, ನಂತರ ಪುಸ್ತಕದಲ್ಲಿ ಅದಕ್ಕೆ ತಕ್ಕ ಸ್ಥಳದಲ್ಲಿ ಬರೆಯುವಂತೆ ಮಾಡಿ.

ಒಂದು ಸ್ಥಳ ಎಲ್ಲಿ ಇದೆ, ಅಲ್ಲಿಗೆ ಹೋಗಿ ಹೇಗೆ ಸೇರುವುದು ಎಂಬುದನ್ನು ತಿಳಿಯಲು ದಿಕ್ಕುಗಳು, ಭೂಪಟಗಳು ಸಹಾಯ ಮಾಡುತ್ತವೆ. ನಿಮ್ಮ ಊರಿನಲ್ಲಿರುವ ಸ್ಥಳಗಳಿಗೆ ಯಾರಾದರೂ ದಾರಿ ಕೇಳಿದರೆ ನಿಮ್ಮಿಂದ ಸಹಾಯ ಮಾಡಲಾಗುತ್ತದೆಯೇ ? ದಿಕ್ಕುಗಳನ್ನು ಅರಿತುಕೊಂಡರೆ ದಾರಿ ಹೇಳುವುದು ಸುಲಭ. ಎಲ್ಲಿಗೆ ಹೋದರೂ ದಿಕ್ಕುಗಳ ಬಗ್ಗೆ ತಿಳಿದುಕೊಂಡಿರಬೇಕು.

ನೀವು ದಿಕ್ಕುಗಳನ್ನು ಅರಿತುಕೊಳ್ಳಲು.....

ಬೆಳಗ್ಗೆ ಸೂರ್ಯನನ್ನು ನೋಡಿ ನಿಲ್ಲಿರಿ.

ಎರಡು ಕೈಗಳನ್ನು ಚಾಚಿಕೊಳ್ಳಿರಿ.



ಸೂರ್ಯನು ಉದಯಿಸುವುದು ಪೂರ್ವ,

ಅದರ ಎದಿರು ಇರುವ ದಿಕ್ಕು ಇರುವುದು ಪಶ್ಚಿಮ

ಬಲ ಪಕ್ಕದಲ್ಲಿ ದಕ್ಷಿಣ

ಎಡ ಪಕ್ಕದಲ್ಲಿ ಉತ್ತರ

ಸಾಕು ಕೈಗಳನ್ನು ಮಡಚಿ.




ಇವು ತಾನೇ ನಾವು ಹೋಗುವ ಸ್ಥಳಕ್ಕೆ ತಕ್ಕಂತೆ ದಿಕ್ಕುಗಳನ್ನು ತಿಳಿದುಕೊಳ್ಳಲು ಇವು ಸಹಾಯ ಮಾಡುತ್ತವೆ.

ನಾಲ್ಕು ದಿಕ್ಕುಗಳನ್ನು ಶಿಕ್ಷಕರು ಹೇಳಿದ ಕೂಡಲೇ ಕವಿತ "ಟೀಚರ್, ಮಲರ್ ಶಾಲೆಗೆ ಬರಲು ಬಲ ಪಕ್ಕ ತಿರುಗಿದಳು, ನಾನು ಎಡ ಪಕ್ಕ ತಿರುಗಿದೆನು..... ಸ್ಥಳದಿಂದ ಸ್ಥಳಕ್ಕೆ, ಮನುಷ್ಯರಿಗೆ ಮನುಷ್ಯರು ದಿಕ್ಕುಗಳು ಬೇರ್ಪಡುವುದೇ?" ಎಂದು ಕೇಳಿದಳು.

ಶಿಕ್ಷಕರು ನಗಾಡಿಕೊಂಡು ಕೆಲವು ಚಿತ್ರಗಳನ್ನು ಅಪ್ಪುವಿಗೆ ತೋರಿಸಿದರು. ಸೂರ್ಯನನ್ನು ಕೇಂದ್ರವಾಗಿಟ್ಟುಕೊಂಡು ಅಪ್ಪುವು ತಿಳಿದ ದಿಕ್ಕುಗಳನ್ನು, ನೀವೂ ಚಿತ್ರ ನೋಡಿ ಗುರುತಿಸಿ.

## ಅಪ್ಪುವಿಗೆ ದಿಕ್ಕುಗಳನ್ನು ತಿಳಿಸಿರಿ.

ಬೆಳಗ್ಗೆ








ಪೂರ್ವ








ಪಶ್ಚಿಮ



ಸಂಜೆ



ಕವಿತಳಿಗೆ ಈಗ ತಾನೇ ದಿಕ್ಕುಗಳ ಬಗ್ಗೆ ತಿಳಿಯಿತು. "ನಾನು ಮತ್ತು ಮಲರ್ ಶಾಲೆಗೆ ಬರುವ ದಿಕ್ಕು ಉತ್ತರ ದಿಕ್ಕು" ಎಂದಳು ಕವಿತ ಸಂತೋಷದಿಂದ. ಕವಿತ ಮತ್ತು ಮಲರ್ ಮನೆಯಿಂದ ಶಾಲೆಗೆ ಉತ್ತರ ದಿಕ್ಕಿನಲ್ಲಿ ಬರುತ್ತಾರೆ. ಮನೆಯಿಂದ ಕವಿತ ಎಡದ ಕಡೆಗೆ ತಿರುಗುತ್ತಾಳೆ, ಮಲರ್ ಬಲದ ಕಡೆಗೆ ತಿರುಗುತ್ತಾಳೆ. ಹಾಗಾದರೆ ಅವರು ಮನೆ ರಸ್ತೆಯ ಯಾವ ದಿಕ್ಕಿನಲ್ಲಿ ಇದೆ ?

ಕವಿತಳ ಮನೆ ರಸ್ತೆಗೆ ________________________ ದಿಕ್ಕಿನಲ್ಲಿ ಇದೆ.

ಮಲರ್ ಮನೆ ರಸ್ತೆಗೆ ________________________ ದಿಕ್ಕಿನಲ್ಲಿ ಇದೆ.




ಯಾವಾಗಲೂ ಚಿತ್ರವನ್ನು ಬಿಡಿಸುವಾಗ ನೋಟ್ ಪುಸ್ತಕದ ಮೇಲ್ಭಾಗವನ್ನು ಉತ್ತರ ದಿಕ್ಕನ್ನಾಗಿ ತಿಳಿದುಕೊಳ್ಳಿರಿ.

**ಸೂಚನೆಯನ್ನು ಓದಿ ಹೆಸರು ಹಲಗೆಯನ್ನು ಬರೆಯಿರಿ.**




**ಚಿತ್ರದಲ್ಲಿರುವ ಮನೆಯ ಮೇಲೆ ನಿನ್ನ ಬೆರಳನ್ನು ಇಡು.**

- ಮನೆಯಿಂದ ನೇರವಾಗಿ ಉತ್ತರ ಕಡೆಗೆ ಬೆರಳನ್ನು ಸರಿಸು. ಸಂತೆಯನ್ನು ತಲುಪುವೆ.
- ಮನೆಯಿಂದ ಪಶ್ಚಿಮದ ಕಡೆಗೆ ಬೆರಳನ್ನು ಸರಿಸು. ಮುಂದುವರಿದು ಉತ್ತರ ಕಡೆಗೆ ಹೋಗು. ಅದೇ ಉದ್ಯಾನವನ.
- ಮನೆಯಿಂದ ಪೂರ್ವದ ಕಡೆಗೆ ಹೋಗು. ಮುಂದುವರಿದು ದಕ್ಷಿಣದ ಕಡೆಗೆ ಹೋಗು. ಕೊನೆಗೆ ಬರುವುದು ತೆಂಗಿನ ತೋಟ.
- ಮನೆಯಿಂದ ನೇರವಾಗಿ ದಕ್ಷಿಣದ ಕಡೆಗೆ ಹೋಗು. ಅಲ್ಲಿರುವುದು ಆಟದ ಮೈದಾನ.
- ಆಟದ ಮೈದಾನದಿಂದ ಪೂರ್ವಕ್ಕೆ ಹೋದರೆ ಶಾಲೆ ಬರುತ್ತದೆ.
- ಆಟದ ಮೈದಾನದಿಂದ ಪಶ್ಚಿಮದಲ್ಲಿರುವುದು ವಸ್ತು ಪ್ರದರ್ಶನ.

## ದಿಕ್ಕನ್ನು ತೋರಿಸುವ ಸಾಧನ :



ಭೂಮಿಯಲ್ಲಿಯೇ ನಮ್ಮಿಂದ ಕೆಲವು ಸಮಯಗಳಲ್ಲಿ ದಿಕ್ಕುಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ನಾಲ್ಕು ಕಡೆಯಲ್ಲೂ ನೀರು ಇರುವ ಸಮುದ್ರವನ್ನು ನೆನಪು ಮಾಡಿಕೊಳ್ಳಿ. ಸಮುದ್ರದಲ್ಲಿ ಪ್ರಯಾಣ ಮಾಡುವವರು ಹೇಗೆ ದಿಕ್ಕುಗಳನ್ನು ತಿಳಿದುಕೊಳ್ಳುತ್ತಾರೆ ? ಇದಕ್ಕೆ ಉಪಯೋಗವಾಗುವುದೇ ದಿಕ್ಕನ್ನು ತೋರಿಸುವ ಸಾಧನ. ಇದರಲ್ಲಿರುವ ಕಾಂತಿಯ ಮುಳ್ಳು ಯಾವಾಗಲೂ ಉತ್ತರದ ಕಡೆಗೆ ಇರುತ್ತದೆ. ಮುಖಮಾಡಿ ಇರುತ್ತದೆ. ಇದುವೇ ಕಡಲ ಪ್ರಯಾಣಿಕರಿಗೆ ಸುಲಭವಾಗಿ ದಿಕ್ಕುಗಳನ್ನು ತಿಳಿಯಲು ಸಹಾಯಕವಾಗಿದೆ. ದಿಕ್ಕನ್ನು ಅರಿಯಲು ಸೂರ್ಯನು ಯಾವ ರೀತಿ ಸಹಾಯ ಮಾಡುತ್ತಾನೆ?   ನಾಲ್ಕು ಮುಖ್ಯ ದಿಕ್ಕುಗಳು ಯಾವುವು ?



## ವಾಸಸ್ಥಳ ಹುಡುಕಿ....

ಮಾಯನೂರ್ ಎಂಬುದು ಒಂದು ಚಿಕ್ಕ ಗ್ರಾಮ. ಆ ಊರಿನ ಉತ್ತರ ಭಾಗದಲ್ಲಿ ಒಂದು ಗದ್ದೆ, ಗದ್ದೆಯ ಪೂರ್ವಕ್ಕೆ ಒಂದು ಚಿಕ್ಕ ಕೊಳ ಇದೆ. ಆ ಕೊಳದಲ್ಲಿ ಹಲವು ಪಕ್ಷಿಗಳು ಕುಟುಂಬದೊಡನೆ ವಾಸಿಸುತ್ತಾ ಬಂದವು. ಅದರಲ್ಲಿ ಬಾತುಕೋಳಿ, ಕೊಕ್ಕರೆ, ಮರಕುಟುಕ, ಮಿಂಚುಳ್ಳಿ ಮುಂತಾದವು ಸ್ನೇಹಿತರು.

ಬೇಸಿಗೆ ಕಾಲ ಬಂದಿತು. ಕೊಳವು ಬತ್ತಲು ತೊಡಗಿತು. ಎಲ್ಲ ಪಕ್ಷಿಗಳು ಕೂಡಿದವು. ಕೊಳದಲ್ಲಿ ನೀರು ಬತ್ತಿಹೋಗಿದೆ. ಇನ್ನು ಏನು ಮಾಡುವುದು? ಎಂದು ಯೋಚಿಸಿದವು.

“ಮಾಯನೂರಿಗೆ ದಕ್ಷಿಣದಲ್ಲಿ ಒಂದು ಕೊಳ ಇದೆ. ಅದು ಯಾವಾಗಲೂ ಬತ್ತುವುದೇ ಇಲ್ಲ. ನಾವು ಅಲ್ಲಿಗೆ ಹೋಗೋಣ” ಎಂದು ಬಾತುಕೋಳಿ ಹೇಳಿತು.





“ಅಯ್ಯೋ! ಅಲ್ಲಿಗೆ ಬೇಡ. ಅಲ್ಲಿ ಮರಗಳಾಗಲೀ ಗದ್ದೆಗಳಾಗಲೀ ಇಲ್ಲವೇ ಇಲ್ಲ. ಮನುಷ್ಯರು ಮಾತ್ರ ಇರುತ್ತಾರೆ. ಎಂದಿತು ಕಾಗೆ .



“ಮುಂಚೆ ಒಂದು ಸಲ ನಾನು ಹಾರಿ ಬರುವಾಗ ನದಿಯೊಂದು ಹರಿಯುವುದನ್ನು ಕಂಡೆನು. ನನ್ನ ಸ್ನೇಹಿತರೊಡನೆ ಹೋಗಿ ಅದು ಎಲ್ಲಿ ಇದೆ ಎಂಬುದನ್ನು ಕಂಡು ಹಿಡಿದು ಬರುತ್ತೇನೆ. ಬಳಿಕ ಅಲ್ಲಿಗೆ ಹೋಗಿ ವಾಸಿಸೋಣ” ಎಂದು ಹೇಳಿತು ಕೊಕ್ಕರೆ.



ಕೊಕ್ಕರೆಯು ಅದರ ಸ್ನೇಹಿತರೊಡನೆ ಮಾಯನೂರಿನ ದಕ್ಷಿಣ ಭಾಗದ ಕಡೆಗೆ ಹಾರಿತು. ಅಲ್ಲಿ ಒಂದು ಕೊಳ, ಅದರ ಪಕ್ಕದಲ್ಲಿ ವಾಹನಗಳ ಓಡಾಟ ಅಧಿಕವಿರುವ ರಸ್ತೆ ಮತ್ತು ಕಟ್ಟಡಗಳನ್ನು ನೋಡಿದವು. ನಂತರ ಅಲ್ಲಿಂದ ಮಾಯನೂರಿನ ಪಶ್ಚಿಮದ ಕಡೆಗೆ ಹಾರಿದವು. ಪಶ್ಚಿಮ ದಿಕ್ಕಿಗೆ ಹಾರುತ್ತಾ ಇರುವಾಗ ಒಂದು ಸುಂದರವಾದ ದೊಡ್ಡ ನದಿಯೊಂದು ಹರಿಯುವುದನ್ನು ನೋಡಿದವು. ಅದರ ಪಕ್ಕದಲ್ಲಿ ಹಚ್ಚಹಸಿರಾದ ಗದ್ದೆಗಳ ಸಾಲು, ದಟ್ಟವಾದ ಮರಗಳು ಇರುವುದನ್ನು ಕಂಡು, ಸಂತೋಷದಿಂದ ಹಿಂತಿರುಗಿದವು. ಉಳಿದ ಪಕ್ಷಿಗಳೊಡನೆ ತಾವು ಕಂಡು ಹಿಡಿದ ಸ್ಥಳದ ಬಗ್ಗೆ ಹೇಳಿದವು. ಎಲ್ಲಾ ಪಕ್ಷಿಗಳು ಆ ನದಿಯ ಭಾಗಕ್ಕೆ ತಮ್ಮ ವಾಸಸ್ಥಳವನ್ನು ಬದಲಾಯಿಸಿಕೊಂಡವು. ನೀರಿನ ಕೊರತೆಯಿಲ್ಲದೆ ಸಂತೋಷದಿಂದ ಬಾಳಿದವು.





ಸಮಾಜ ವಿಜ್ಞಾನ

ಚಿತ್ರದಲ್ಲಿ ಪಕ್ಷಿಗಳು ಹುಡುಕಿದ ಜಲ ಭಾಗಗಳನ್ನು, ಅದರ ದಿಕ್ಕುಗಳನ್ನು ಕಂಡು ಹಿಡಿದು ಬಿಡಿಸಿರಿ.




ಪುಟ 155ರಲ್ಲಿ ಇರುವ ಚಿತ್ರವನ್ನು ನೋಡು.

- ಕವಿತ, ಶಾಲೆಗೆ ಬರುವ ದಿಕ್ಕನ್ನು ಹೇಳು.
- ನದಿಯ ಪಶ್ಚಿಮದಲ್ಲಿ ಏನಿದೆ?
- ದೇವಸ್ಥಾನದ ____________ ದಿಕ್ಕಿನಲ್ಲಿ ಕಬೀರನ ಮನೆ ಇದೆ.
- ದೇವಾಲಯದ ____________ ದಿಕ್ಕಿನಲ್ಲಿ ಇರುವುದು ರೈಲ್ವೆ ರಸ್ತೆ.

# ೫. ನೋಡಿ ನಡೆಯಬೇಕು





ರಾತ್ರಿಯಲ್ಲಿ ಮಳೆ ಸುರಿದಿತ್ತು. ಬೆಳಗ್ಗೆ ಶಾಲೆಯ ತೇವಗೊಂಡ ಆಟದ ಮೈದಾನದಲ್ಲಿ ಮಕ್ಕಳು ಆಟವಾಡಿಕೊಂಡಿದ್ದರು.

ಕೆಲವು ಮಕ್ಕಳು ಮಣ್ಣಿನಲ್ಲಿ ಗೆರೆಗಳನ್ನು ಹಾಕಿ ಪಾಂ....ಪಾಂ.... ಎಂದು ವಾಹನಗಳ ಹಾಗೆ ಶಬ್ದ ಮಾಡಿಕೊಂಡು ಓಡಾಡುತ್ತಿದ್ದರು.

ಅಬ್ದುಲ್ ಶಿಕ್ಷಕರನ್ನು ಕರೆತಂದು ಆ ಗೆರೆಗಳನ್ನು ತೋರಿಸಿದನು. "ರಸ್ತೆಯ ಹಾಗೇಯೇ ಇದೆ ನೋಡಿರಿ.." ಎಂದನು. "ಮಣ್ಣಿನಲ್ಲಿ ಆಟವಾಡಿದ್ದು ಸಾಕು. ಎಲ್ಲರೂ ಹೋಗಿ ಕೈಕಾಲುಗಳನ್ನು ತೊಳೆದುಕೊಂಡು ತರಗತಿಗಳಿಗೆ ಬನ್ನಿರಿ" ಎಂದರು ಶಿಕ್ಷಕರು.

ತರಗತಿಗೆ ಬಂದಂತ ಮಕ್ಕಳ ಬಳಿ "ಏನು ಆಟವಾಡಿದಿರಿ?" ಎಂದು ಕೇಳಿದರು. "ವಾಹನಗಳನ್ನು ಓಡಿಸಿದೆವು" ಎಂದು ಒಕ್ಕೊರಳಿನಿಂದ ಹೇಳಿದರು. "ಯಾವ ಯಾವ ವಾಹನಗಳನ್ನು ಓಡಿಸಿದಿರಿ?" ಎಂದರು ಶಿಕ್ಷಕರು. "ಬಸ್ಸು, ಕಾರು, ಆಟೋ, ರೈಲು, ಮೋಟಾರು ಸೈಕಲ್" ಎಂದಳು ವಿಜಿ.



"ತುಂಬಾ ಇಕ್ಕಟ್ಟು, ವಾಹನಗಳ ಶಬ್ದ. ಸೂರ್ಯ ಮತ್ತು ರಾಮುವು ನೆಲದ ಮೇಲೆ ನಿಂತಿದ್ದ ತಣ್ಣೀರನ್ನು ನಮ್ಮೆಲ್ಲರ ಮೇಲೆ ಎರಚಿಬಿಟ್ಟರು" ಎಂದನು ಮೋಹನ್.

“ಇದರಿಂದ ನನ್ನ ಮೇಲಂಗಿಗೆ ಮಣ್ಣಿನ ಕರೆಯಾಯಿತು. ರಾಮು ಹಾಗು ಸತೀಶನು ಜಗಳವಾಡಿಕೊಂಡು ಕೆಳಗೆ ಬಿದ್ದು ಬಿಟ್ಟರು” ಎಂದಳು ಗೀತ.



“ನಾನು ತಿರುಗಲು ಪ್ರಯತ್ನಿಸಿದೆ ಆದರೆ ಐಸಾಕ್ ಕೈಗಳನ್ನು ಚಾಚಿಕೊಂಡು ಓಡಿಬಂದ ಕಾರಣ ಕೆಳಗೆ ಬಿದ್ದುಬಿಟ್ಟೆನು” ಎಂದನು ರಾಮು.



“ಎಲ್ಲರೂ ವಾಹನಗಳಲ್ಲಿಯೇ ಪ್ರಯಾಣಿಸಿದಿರಾ? ಯಾರು ನಡೆದು ಹೋಗಲಿಲ್ಲವಾ?” ಎಂದು ಕೇಳಿದರು ಶಿಕ್ಷಕರು.

“ನಡೆಯಲು ಸ್ಥಳವೇ ಇರಲ್ಲಿಲ್ಲ, ಯಾರು ಯಾರನ್ನು ಗಮನಿಸದೆ. ಅವರವರ ಇಷ್ಟದಂತೆ ಓಡಾಡಿದರು. ಎಂದನು ಸಂತೋಷ.

“ಹೀಗೆಯೇ ಪ್ರತಿನಿತ್ಯವು ರಸ್ತೆಗಳಲ್ಲಿ ನಡೆಯುತ್ತಿದೆ. ಆದುದರಿಂದಲೇ ನಾವು ರಸ್ತೆಗಳಲ್ಲಿ ಜಾಗ್ರುತೆಯಿಂದ ನಡೆಯಬೇಕು. ರಸ್ತೆಯಲ್ಲಿ ಸಂಚಾರಕ್ಕೆಂದೇ ಕೆಲವು ನಿಯಮಗಳವೆ. ಅವುಗಳು ಯಾವುವೆಂದು ತಿಳಿಯೋಣವೇ?” ಎಂದರು.



ಇದನ್ನು ಇಂದು ನೀವು ಆಡಿದ ಆಟದಿಂದಲೇ ಸುರುಮಾಡೋಣ. “ಪಾದಚಾರಿಗಳಿಗಾಗಿ ಇರುವ ರಸ್ತೆಯ ನಿಯಮಗಳಾವುವು? ಯಾರಿಗಾದರು ಗೊತ್ತಿದೆಯೇ?” ಎಂದು ಕೇಳಿದರು ಶಿಕ್ಷಕರು.



“ಪಾದಚಾರಿ ಮಾರ್ಗವನ್ನು ಉಪಯೋಗಿಸಬೇಕು” ಎಂದಳು ಸುಶೀಲ.

“ಆದರೆ ನನ್ನ ಮನೆಯ ಹತ್ತಿರ ಪಾದಚಾರಿ ಮಾರ್ಗವೇ ಇಲ್ಲವಲ್ಲ” ಎಂದಳು ಮೀನ.

"ಪಾದಚಾರಿ ಸಂಚಾರ ಮಾರ್ಗ ಇಲ್ಲದ ಸ್ಥಳಗಳಲ್ಲಿ ರಸ್ತೆಗಳ ಬದಿಯಲ್ಲಿ ನಡೆಯಬೇಕು" ಎಂದು ವಿವರಿಸಿದರು ಶಿಕ್ಷಕರು.

"ನಾವು ರಸ್ತೆಯಲ್ಲಿ ಓಡಬಾರದು, ಆಟವಾಡಬಾರದು" ಎಂದು ಹೇಳಿದನು ಐಸಕ್.

"ನಾನು ಶಾಲೆಗೆ ಬರುವಾಗ ರಸ್ತೆಯ ಇನ್ನೊಂದು ಪಕ್ಕದಲ್ಲಿರುವ ಸ್ನೇಹಿತರೊಡನೆ ಮಾತನಾಡುವೆ. ಇನ್ನು ಮುಂದೆ ಈ ರೀತಿ ಮಾಡಲಾರೆ" ಎಂದಳು ವಸಂತಿ.



"ಅದರಿಂದ ಅವರ ಗಮನ ಬೇರೆಕಡೆ ಹೋಗುತ್ತದೆ." ಎಂದು ಹೇಳಿದರು ಶಿಕ್ಷಕರು.

"ನಾನು ರೈಲು ಹಳಿಯನ್ನು ದಾಟಿ ಶಾಲೆಗೆ ಬರುವೆನು" ಎಂದು ಹೇಳಿದನು ಕಣ್ಣನ್.

"ರೈಲು ಹಳಿಗಳನ್ನು ದಾಟುವಾಗ ಹೆಚ್ಚು ಗಮನವಾಗಿ ಇರಬೇಕು. ಯಾವಾಗಲೂ ರೈಲು ಹಳಿಗಳ ಮೇಲೆ ನಡೆಯಬಾರದು. ಎಚ್ಚರಿಕೆಯ ದೀಪ ಹಾಕಿದೊಡನೆ, ಯಾವ ಕಾರಣಕ್ಕೂ ರೈಲು ಕಂಬಿಗಳನ್ನು ದಾಟಲೇಬಾರದು" ಎಂಬ ಸಲಹೆಯನ್ನು ಶಿಕ್ಷಕರು ನೀಡಿದರು.




"ಅಪ್ಪಪ್ಪಾ! ಎಷ್ಟು ಕಾನೂನುಗಳು. ಹೇಗೆ ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು"? ಎಂದು ಹೇಳಿದ ಕವಿನ್.

"ನಾನು ಕೇಳುವ ಪ್ರಶ್ನೆಗಳಿಗೆ ಸರಿಯಾ? ತಪ್ಪಾ? ಎಂದು ಮಾತ್ರ ಉತ್ತರಿಸಿ ನೋಡೋಣ." ಎಂದು ಹೇಳಿದರು ಶಿಕ್ಷಕರು.

## ವಿದ್ಯಾರ್ಥಿಗಳು ಯಾವ ಉತ್ತರಗಳನ್ನು ಹೇಳಿರಬಹುದು....?

ಸರಿ ಎಂದರೆ ನಗುವ ಮುಖಕ್ಕೂ,

ತಪ್ಪು ಎಂದರೆ ದುಃಖದ ಮುಖಕ್ಕೂ ಬಣ್ಣಹಚ್ಚಿ.

ಪಾದಚಾರಿ ದಾರಿಯಲ್ಲಿ ನಡೆಯುವುದು

ಪಾದಚಾರಿ ದಾರಿ ಇಲ್ಲದ ಸ್ಥಳದಲ್ಲಿ, ರಸ್ತೆಯ ಬದಿಯಲ್ಲಿ ನಡೆಯಬೇಕು.

ರಸ್ತೆಯಲ್ಲಿ ಅಡ್ಡಲಾಗಿ ದಾಟುವುದು

ರಸ್ತೆಯ ಬದಿಯಲ್ಲಿ ಅಥವಾ ರಸ್ತೆಯಲ್ಲಿ ಓಡಾಡುವುದು

ರಸ್ತೆಯಲ್ಲಿ ನಡೆಯುವಾಗ ಕೈದೂರವಾಣಿ (ಸೆಲ್‌ಫೋನ್) ಯ ಮೂಲಕ ಮಾತನಾಡುವುದು.

ರಸ್ತೆಯಲ್ಲಿ ಜಾಹೀರಾತು ಫಲಕ ನೋಡಿಕೊಂಡು ನಡೆಯುವುದು

ರೈಲು ಹಳಿಗಳನ್ನು ದಾಟುವಾಗ ಹೆಚ್ಚು ಗಮನವಾಗಿ ಇರಬೇಕು.

ರೈಲು ಹಳಿಗಳನ್ನು ದಾಟುವಾಗ ಎಚ್ಚರಿಕೆಯ ದೀಪಗಳನ್ನು ನೋಡಿಕೊಂಡು ನಡೆಯಬೇಕು.

" ನಿಜವಾಗಿಯೂ! ನಿಯಮಗಳನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ಏನೂ ಕಷ್ಟವಿಲ್ಲ" ಎಂದು ಕವಿನ್ ನಗುತ್ತಲೆ ಹೇಳಿದನು.




ಸಾರಿಗೆ ಸಂಸ್ಥೆಗೆ ಸಂಬಂಧಿಸಿದ ಆರಕ್ಷಕರನ್ನು ಮಾರನೆಯ ದಿನ ಶಿಕ್ಷಕರು ತರಗತಿಗೆ ಕರೆದುಕೊಂಡು ಬಂದರು. ಅವರ ಬಳಿ "ರಸ್ತೆದಾಟುವಾಗ ಜೋಪಾನವಾಗಿ ಹೋಗುವುದು ಹೇಗೆ?" ಎಂದು ಕೇಳಿದಳು ಮೀನಾ. ಆರಕ್ಷಕರು ತಾವು ತೆಗೆದುಕೊಂಡು ಬಂದಿದ್ದ ರಸ್ತೆ ಸಂಚಾರ ರಕ್ಷಣಾ ನಿಯಮಗಳ ಸೂಚನಾ ಫಲಕವನ್ನು ತೋರಿಸಿ ವಿವರವಾಗಿ ತಿಳಿಸಿದರು.



**ಚಿತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದ ವಿವರಗಳು.**

ಪಟ್ಟಣಗಳಲ್ಲಿ ಪಾದಚಾರಿಗಳ ದಾರಿಯಲಿಯೇ ನಡೆಯಬೇಕು. ಪಾದಚಾರಿ ದಾರಿ ಇಲ್ಲದ ಸ್ಥಳಗಳಲ್ಲಿ ರಸೆಯ ಬದಿಯಲ್ಲಿ ನಡೆಯಬೇಕು.



**ವಾಹನಗಳಿಗಾಗಿ ಎಚ್ಚರಿಕೆಯ ದೀಪಗಳು.**



→ ಕೆಂಪು — ನಿಲ್ಲು

→ ಹಳದಿ — ಗಮನಿಸು

→ ಹಸಿರು — ಹೋಗು

**ಪಾದಚಾರಿಗಳಿಗಾಗಿ ಎಚ್ಚರಿಕೆಯ ದೀಪಗಳು**

ಕೆಂಪು — ನಿಲ್ಲು ←

ಹಸಿರು — ಹೋಗು ←



ಇವುಗಳನ್ನು ಪಟ್ಟಣಗಳಲ್ಲಿ, ಜನಸಂದಣಿ ಅಧಿಕವಾಗಿರುವ ರಸ್ತೆಗಳು ಸೇರುವ ವೃತ್ತಗಳಲ್ಲಿ ಅಳವಡಿಸಲಾಗಿರುತ್ತದೆ.  ಇದನ್ನು ಗಮನಿಸಿ ಪಾದಚಾರಿಗಳು ರಸ್ತೆಯನ್ನು ದಾಟಬೇಕು.



ಪಾದಚಾರಿಗಳು ಹಸಿರು ಬಣ್ಣದ ದೀಪ ಪ್ರಕಾಶಿಸಿದೊಡನೆ ರಸ್ತೆಯನ್ನು ದಾಟಬೇಕು. ರಸ್ತೆಯನ್ನು ದಾಟುವಾಗ ಅಡ್ಡಲಾಗಿ ಹಾಕಿರುವ ಬಿಳಿ (ಜೀಬ್ರಾಕ್ರಾಸ್) ಪಟ್ಟಿ ಮೇಲೆಯೇ ನಡೆಯಬೇಕು.

ಎಚ್ಚರಿಕೆಯ ದೀಪ ಇಲ್ಲದೆ ಇರುವ ಸ್ಥಳಗಳಲ್ಲಿ, ರಸ್ತೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆ ದಾಟುವಾಗ, ಎರಡು ಕಡೆ ನೋಡಿ ದಾಟಬೇಕು. ಮೊದಲು ಬಲಗಡೆಯಲ್ಲೂ, ನಂತರ ಎಡಗಡೆಯಲ್ಲೂ ನೋಡಬೇಕು. ಯಾವುದೇ ವಾಹನಗಳು ಇಲ್ಲದ ಸಮಯದಲ್ಲಿ ರಸ್ತೆಯನ್ನು ದಾಟಬೇಕು.

ವಾಹನಗಳನ್ನು ಓಡಿಸುವವರು ಸಣ್ಣ ರಸ್ತೆಗಳಿಂದ ದೊಡ್ಡ ರಸ್ತೆಗಳಿಗೆ ಬರುವಾಗ, ವಾಹನದ ವೇಗವನ್ನು ಕಡಿಮೆ ಮಾಡಬೇಕು. ಪ್ರಧಾನ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ದಾರಿ ಬಿಡಬೇಕು.

## ರಸ್ತೆಯಲ್ಲಿ ಸುರಕ್ಷಿತವಾಗಿ ಹೋಗಲು ಕೆಲವು ಎಚ್ಚರಿಕೆಯ ಚಿಹ್ನೆಗಳು.



ಅಡ್ಡರಸ್ತೆಯ ಸುರಕ್ಷಿತ ಚಿಹ್ನೆ



ರೈಲು ದಾರಿಯ ರಕ್ಷಣ ಚಿಹ್ನೆ



ಶಾಲೆ ಇದೆ



ವೇಗ ತಡೆಯುವ ದಿಬ್ಬ.



ಹಳ್ಳ ಇದೆ



ಎಡಭಾಗದ ತಿರುವು



ಬಲಭಾಗದ ತಿರುವು



ಬಸ್ ನಿಲ್ದಾಣ



ಶಬ್ದ ಮಾಡಬಾರದು

ಈ ರೀತಿ ಅಡ್ಡಲಾಗಿ ಗೆರೆಹಾಕಿದ್ದರೆ ಅದನ್ನು ಮಾಡಬಾರದು ಎಂದು ಅರ್ಥ.

## ಚಾಲಕನು ಏಕೆ ಗಲಾಟೆ ಮಾಡುತ್ತಿದ್ದಾನೆ?



## ಯಾವುದು ಸರಿ? ಯಾವುದು ತಪ್ಪು ? ತಪ್ಪು ಎಂದರೆ ಏಕೆ ಎಂದು ತಿಳಿಸು.

















ಚಿತ್ರದಲ್ಲಿರುವ ಕೊಟ್ಟಿರುವ ಸಂಖ್ಯೆಗಳನ್ನು ಪತ್ತೆಹಚ್ಚಿ ಸರಿಯಾದ ಹೆಸರಿನಲ್ಲಿ ಜೋಡಿಸೋಣ.

| | | | |
|---|---|---|---|
| ದಾರಿದೀಪ | ○ | ○ | ಹೆಸರಿನ ಫಲಕ |
| ಎಚ್ಚರಿಕೆಯ ದೀಪ | ○ | ○ | ಪಾದಚಾರಿಗಳು ರಸ್ತೆಯನ್ನು ದಾಟುವ ಅಡ್ಡಪಟ್ಟಿ |
| ಪಾದಚಾರಿ ರಸ್ತೆ | ○ | ○ | ಸಂಚಾರ – ಸಾರಿಗೆ ಆರಕ್ಷಕರು |

ಯಾವ ಸ್ಥಳದಲ್ಲಿರುವ ಪಾದಚಾರಿಗಳು, ಈವಾಗ....

ರಸ್ತೆಯನ್ನು ದಾಟಬಾರದು — ಕೆಂಪು ಬಣ್ಣ ಹಚ್ಚು

ರಸ್ತೆಯನ್ನು ದಾಟಬಹುದು — ಹಸಿರು ಬಣ್ಣ ಹಚ್ಚು



**ಯಾವ ಚಿಹ್ನೆ ಯಾವ ಹಲಗೆಯಲ್ಲಿರಬೇಕು?**



# ನಿಮ್ಮ ಗಮನಕ್ಕೆ . . .!

## I. ಸರಿಯಾದವುಗಳು ಯಾವುವು?
## ಸರಿಯಲ್ಲದವುಗಳು ಯಾವುವು? ( ✔ ) ( ✖ )ಎಂದು ಗುರುತಿಸು.

1. ನೊಣ ಮುತ್ತಿದ ತಿಂಡಿತಿನಿಸನ್ನು ತಿನ್ನುವುದು ( )
2. ಮುಂಜಾನೆ ಏಳುವುದು ( )
3. ಸಾರ್ವಜನಿಕ ಸ್ಥಳಗಳಲ್ಲಿ ಎಂಜಲು ಉಗಿಯುವುದು ( )
4. ಪ್ರಾಣಿಗಳಲ್ಲಿ ದಯೆ ತೋರುವುದು ( )
5. ಇತರರ ವಸ್ತುಗಳನ್ನು ಅನುಮತಿಯಿಲ್ಲದೆ ತೆಗೆದುಕೊಳ್ಳುವುದು ( )
6. ಆಟವಾಡಿದ ಬಳಿಕ ಕೈ ಕಾಲುಗಳನ್ನು ತೊಳೆಯುವುದು ( )
7. ತಮ್ಮ ತಮ್ಮ ವಸ್ತುಗಳನ್ನು ಸರಿಯಾದ ಸ್ಥಳದಲ್ಲಿಯೇ ಇಡುವುದು ( )
8. ತರಗತಿಯ ಮೇಜಿನ ಮೇಲೆ ಹತ್ತಿ ಆಡುವುದು ( )
9. ಶಾಲೆಯಲ್ಲಿ ಗೋಡೆಗಳ ಮೇಲೆ ಗೀಚುವುದು ( )
10. ಸಹ ವಿದ್ಯಾರ್ಥಿಗಳಿಗೆ ನೆರವಾಗುವುದು ( )

## II. ಬಣ್ಣ ಹಚ್ಚು.

ಎಚ್ಚರಿಕೆಯ ಬೆಳಕಿನ ಸೂಚನೆಗೆ ತಕ್ಕಂತಹ ಬಣ್ಣವನ್ನು ಹಚ್ಚು




## III. ಉತ್ತರಿಸಿ

1. ಸಾರ್ವಜನಿಕ ಸ್ಥಳಗಳಲ್ಲಿ ನಾವು ಯಾವ ಯಾವ ನಿಯಮಗಳನ್ನು ಅನುಸರಿಸುತ್ತವೆ?
2. ನಗರಗಳಲ್ಲಿ ರಸ್ತೆಯ ಅಡ್ಡವಾಗಿ ಬಿಳಿಯ ಗೆರೆಗಳನ್ನು ಏಕೆ ಹಾಕಿರುತ್ತಾರೆ?
3. ನಿಮ್ಮ ಬೀದಿಯಲ್ಲಿ ವಾಸಿರುತ್ತಿರುವವರಿಗೆ ನೀನು ಯಾವ ಯಾವ ರೀತಿಗಳಲ್ಲಿ ಸಹಾಯ ಮಾಡುವೆ?
4. ಮುಖ್ಯವಾದ ನಾಲ್ಕು ದಿಕ್ಕುಗಳು ಯಾವುವು? ನಿನ್ನ ಶಾಲೆಯು ಇರುವ ಸ್ಥಳವನ್ನು ದಿಕ್ಕುಗಳೊಂದಿಗೆ ವಿವರಿಸು.
5. ದಾರಿಯನ್ನು ಅಡ್ಡವಾಗಿ ದಾಟುವ ಮೊದಲು ಏನನ್ನು ಗಮನಿಸಬೇಕು?

## IV. ನಿನ್ನ ಶಾಲೆಯ ಚಿತ್ರವನ್ನು ಬರೆಯಿರಿ.
## ಅದರ ನಾಲ್ಕು ದಿಕ್ಕುಗಳಲ್ಲಿ ಏನೇನು ಇದೆ ಎಂದು ತಿಳಿಸು.

## ‘ನನ್ನಿಂದ ಸಾಧ್ಯ, ನಾನು ಮಾಡಿದೆ’
## ('I can, I did')
## ವಿದ್ಯಾರ್ಥಿಗಳ ಚಟುವಟಿಕೆ ದಾಖಲೆ

**ವಿಷಯ :**

| ಕ್ರ.ಸಂ | ತಾರೀಖು | ಪಾಠದ ಸಂಖ್ಯೆ | ಪಾಠದ ಹೆಸರು | ಚಟುವಟಿಕೆಗಳು | ಅಭಿಪ್ರಾಯಗಳು |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |